ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೦ ಆಗಸ್ಟ್-೨೦೦೯ ಸಂಚಿಕೆ-೧



ಜನಪದ ವಿಚಾರದಲ್ಲಿ

ಆಗಸ್ಟ್–೨೦೦೯

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಆಗಸ್ಟ್ – ೨೦೦೯
ಸಂಪುಟ – ೧೦
ಸಂಚಿಕೆ –೧

ಸಂಪಾದಕ
ಸುರೇಂದ್ರ ಕೌಲಗಿ

ಚಂದಾ ವಿವರ
ವಾರ್ಷಿಕ : ರೂ ೧೦೦/–
ಬಿಡಿ ಸಂಚಿಕೆ : ರೂ ೧೦/–

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ–೫೭೧೪೩೧
ಜಿಲ್ಲಾ ಮಂಡ್ಯ

✆08236 316344
e-mail : janapada@yahoo.com
web: janapada.net

ಮೂವತ್ತು ಮೂರು ಕೋಟಿ

ಮಕ್ಕಳಿವರೇನಮ್ಮ? ಮಕ್ಕಳಿವರೇನಮ್ಮ?
ಮೂವತ್ತು ಮೂರು ಕೋಟಿ॥

ಮೂವತ್ತುಮೂರು ಕೋಟೀ,
ಮೂವತ್ತುಮೂರು ಕೋಟೀ!
ಮಕ್ಕಳಿವರೇನಮ್ಮ? ಮಕ್ಕಳಿವರೇನಮ್ಮ?
ಮೂವತ್ತುಮೂರು ಕೋಟಿ!
ನಾ ಹಡೆದ ಮೂವತ್ತುಮೂರು ಕೋಟಿ!!

ಬಯಕೆಗಳು ಬಸಿರುಗಳು ಹಡೆದದ್ದು ಹಿಂಗಿದ್ದು
ಮೂವತ್ತುಮೂರು ಕೋಟಿ!
ಸೂಲಗಳು ಮೂವತ್ತುಮೂರು ಕೋಟಿ!!

ಹಲಕೆಲವು ಹುಳುಗಳೆನ್ನಿ!
ಹಲಕೆಲವು ಕುರುಡು ಕುನ್ನಿ!
ಕೆಲಕೆಲವು ಹುಚ್ಚುಕುರಿ!
ಕೆಲವು ಹೊಸಹೊಚ್ಚ ಮರಿ!
ಗಂಡುತನಕೇಸೊ ಸೊನ್ನಿ!
ಲೆಕ್ಕಕ್ಕೆ ಮೂವತ್ತುಮೂರು ಕೋಟಿ!!

ಅತ್ತೊಂದು ಹತ್ತು ಕೋಟಿ!
ಇತ್ತೊಂದು ಹತ್ತು ಕೋಟಿ!
ಸೋದರರು ಇದ್ದರೂ ಆದರದ ನುಡಿ ಇಲ್ಲ;
ಅತ್ತಿತ್ತ ಹತ್ತು ಕೋಟಿ!
ಹೆಸರಿಗೇ ಮೂವತ್ತುಮೂರು ಕೋಟಿ!!

ಬೀತ ನರಪೇತುಗಳಿರಾ! ಬಾತಂಥ ಪ್ರೇತಗಳಿರಾ!
ಮಣ್ಣನ್ನು ಮುಕ್ಕುವಿರಿ, ಮಸಣದಲಿ ಬಿಕ್ಕುವಿರಿ!
ಹಾರಿರೋ ಜೊಳ್ಳುಗಳಿರಾ।
ಉಸಿರಿಡುವೆ, ಮೂವತ್ತುಮೂರು ಕೋಟಿ!!

ಸುಣ್ಣವನು ಸುರಿದ ಮೇಲೆ ಕಣ್ಣಿರನೆರೆಯೆ ಹಾಲೇ?
ಬಣ್ಣ ಬಣ್ಣದ ಜೀವ ಕತಕತನೆ ಕುದಿಯುವವು
ಮನೆಯಾಯ್ತು ಮಲ್ಲಸಾಲೆ;
ಇದು ಬದುಕೆ? ಮೂವತ್ತುಮೂರು ಕೋಟಿ!!

– *ಅಂಬಿಕಾತನಯದತ್ತ*

ವಿಚಾರ ದೀಪ್ತಿ

'ಪೂನಾ ಒಪ್ಪಂದ'ದ ಬಗ್ಗೆ ಸಕಾರಾತ್ಮಕ ಚಿಂತನೆ

ಇಂದು ನಿಂದನೆಯ ರಾಜಕಾರಣದ ವರಸೆಗಳನ್ನು ಕಂಡು ಭಾರತ, ಅದರಲ್ಲೂ ಹೊಸ ತಲೆಮಾರು ಬೇಸತ್ತಿದೆ. ಅಲ್ಪಸಂಖ್ಯಾತರನ್ನು ನಿಂದಿಸುವ ರಾಜಕಾರಣ ಮಾಡುವ ಪಕ್ಷಗಳನ್ನು ತಿರಸ್ಕರಿಸಿದಂತೆ ಗಾಂಧೀ ನಿಂದನೆಯ ರಾಜಕಾರಣವನ್ನೂ ಭಾರತದ ಜನ ತಿರಸ್ಕರಿಸತೊಡಗಿದ್ದಾರೆ. ಅದರಲ್ಲೂ ಮಹಿಳೆಯರಂತು ಈ ನಿಂದನೆಯ ರಾಜಕಾರಣವನ್ನು ಅಷ್ಟು ಇಷ್ಟಪಡಲಾರರು. ಗಾಂಧೀ ವಿಮರ್ಶೆಯನ್ನು ಅಸಹ್ಯಕರ ಮಟ್ಟಕ್ಕೆ ಒಯ್ದ ಬಿಎಸ್‌ಪಿ ಚಿಂತಕ ವಾಚಾಳಿಗಳು ಕೂಡ ಬಿ.ಎಸ್.ಪಿ.ಯ ಬಲ ಕುಗ್ಗಲು ಕಾರಣವಾಗಿದ್ದಾರೆ. ದಲಿತ ವಲಯದಿಂದಾಚೆಗೆ ಬಿಎಸ್‌ಪಿ ಹೆಚ್ಚು ಬೆಳೆಯದಿರಲು ಇದು ಕೂಡ ಒಂದು ಕಾರಣ.

ಗಾಂಧೀಜಿಯ ಒಂದು ನಿಲುವಿನಿಂದ ತಮಗೆ ಅನ್ಯಾಯವಾಗಿದೆ ಎಂದು ದಲಿತರಿಗೆ ಅನ್ನಿಸಿದರೆ ಅದು ಸಹಜ. ಆದರೆ ಗಾಂಧೀ ಪ್ರಭಾವದಿಂದ ಕೂಡ ಈ ದೇಶದಲ್ಲಿ ಅಸ್ಪೃಶ್ಯತೆ ಕೊಂಚವಾದರೂ ಹಿಮ್ಮೆಟ್ಟಿದೆ ಎಂಬುದು ಸತ್ಯ. 'ಮುಂದಿನ ಜನ್ಮದಲ್ಲಾದರೂ ಭಂಗಿಯಾಗಿ ಹುಟ್ಟುತ್ತೇನೆ' ಎಂಬ ಗಾಂಧೀಜಿಯ ಮಾತು ಕಪಟದ್ದಾಗಿರಲಿಲ್ಲ. ಅದು ನಿಜಕ್ಕೂ ಹೃದಯದ ಆಳದಿಂದ ಮಾತಿನಂತಿತ್ತು.ಸ್ವಾತಂತ್ರ್ಯ ಚಳವಳಿಯ ಜೊತೆಗೆ ದಲಿತರ ವಿಮೋಚನೆಯ ಪ್ರಶ್ನೆಯನ್ನೂ ಗಾಂಧೀಜಿ ಬೆಸೆದದ್ದು ಈ ಹಿನ್ನಲೆಯಲ್ಲಿಯೇ. ಗಾಂಧೀ ಚಿಂತನೆ ಸ್ಪರ್ಶಿಸುವ ಲಕ್ಷಾಂತರ ಮಂದಿಯಲ್ಲಿ ಕಷ್ಟದ ಬಗ್ಗೆ ಅಷ್ಟಿಷ್ಟು ಅರಿವು ಹುಟ್ಟಿದೆ. ಆದ್ದರಿಂದ ಗಾಂಧೀ ನಿಂದನೆಯಿಂದ ಮತಗಳಿಸಬಹುದೆಂದು ಭ್ರಮಿಸಿರುವ ಬೆಹನ್ಜೀ ಹಾಗೂ ಗಾಂಧೀಯನ್ನು ನಕಲು ಮಾಡಿ ದಲಿತರ ಮನೆಗೆ ಭೇಟಿ ನೀಡುವ ಕೃತ್ರಿಮ ರಾಜಕಾರಣವನ್ನೇ ಅತಿಮಾಡುವ ರಾಜಕುಮಾರ–ಈ ಇಬ್ಬರನ್ನೂ ನಿಜವಾದ ಗಾಂಧೀ ಚೈತನ್ಯ ಸ್ಪರ್ಶಿಸಬೇಕಾಗಿದೆ. ಮೇಧಾ ಪಾಟ್ಕರ್‌ರಿಂದ ಹಿಡಿದು ರೈತ ಚಳವಳಿಯ ನಾಯಕ ಪ್ರೊ.ಎಂ.ಡಿ.ನಂಜುಂಡಸ್ವಾಮಿಯವರೆಗೆ ವಿವಿಧ ಚಳವಳಿಗಳ ನಾಯಕಿ–ನಾಯಕರಲ್ಲಿ ಹಾಗೂ ಕೋಟ್ಯಂತರ ಚಳವಳಿಗಾರರಲ್ಲಿ ನಿರಂತರ ಮರುಹುಟ್ಟು ಪಡೆದಿರುವ ಗಾಂಧೀವಾದ ಈ ದೇಶದ ದಲಿತರ ಹಾಗೂ ಎಲ್ಲ ದುರ್ಬಲರ ಹೋರಾಟದ ಒಂದು ಪ್ರಬಲ ಅಸ್ತ್ರ ಕೂಡ. ಈ ಸತ್ಯವನ್ನು ಗಾಂಧೀ ನಿಂದಕರು ಹಾಗೂ ಗಾಂಧೀ ಅನುಕರಣವೀರರು ಆಳವಾಗಿ ಅರಿಯಬೇಕಾಗಿದೆ.

– ನಟರಾಜ್ ಹುಳಿಯಾರ್

ಓ, ಮಾತೆಯೇ ನಿನ್ನ ಪಯಣ ಯಾವ ದಿಕ್ಕಿಗೆ?

- ಸುರೇಂದ್ರ ಕೌಲಗಿ

ಭಾರತ ಮಾತೆ ತನ್ನ ಸ್ವಾತಂತ್ರ್ಯದ ಅರವತ್ತಮೂರನೇ ವರ್ಷದ ಸಂಭ್ರಮವನ್ನು ಆಚರಿಸುತ್ತಿದ್ದಾಳೆ. ಆದರೆ ಆ ಸಂಭ್ರಮದ ಹರ್ಷೋನ್ಮಾದದಲ್ಲಿ ಯಾವ ದಿಕ್ಕಿನತ್ತ ತಾನು ಹೋಗಬೇಕೆಂಬುದು ಅವಳಿಗೆ ತಿಳಯದಾಗಿದೆ! ಬಂಧನದ ಸಂಕೋಲೆಯನ್ನು ಕಿತ್ತೆಸಯಲಾಗಿದೆ, ಮರುಜನ್ಮ ಪಡೆಯಲಾಗಿದೆ, ಬಾಲ್ಯ, ಯೌವನ ಕಳೆದು ಅರವತ್ತರ ತುಂಬು ಅನುಭವದ ಹಿರಿತನದ ಜೀವನವೂ ಪ್ರಾರಂಭವಾಗಿದೆ. ಆದ್ದರಿಂದ ಯಾವ ಕಡೆಗೆ ಹೋಗಬೇಕೆಂಬುದೇ ಭಾರತಮಾತೆಗೆ ತಿಳಿಯದಾಗಿದೆ. ಆದರೆ ಬುದ್ಧಿ ಬ್ರಮಿತಗೊಂಡಿದೆ. ಅರವತ್ತರ ಅರಳುಮರಳು ಪ್ರಾರಂಭವಾಗಿದೆ. ಬಿಡುಗಡೆಗೊಂಡ ಕೂಡಲೆ ಪೂರ್ವದಿಕ್ಕಿನ ಬಿಳಿಯ ಬಣ್ಣಕ್ಕಿಂತ ಪಶ್ಚಿಮ ದಿಕ್ಕಿನಲ್ಲಿ ಕಂಡ ಹೊಂಬಣ್ಣ ಆಕರ್ಷಕವಾಗಿ ಕಣ್ಣಿಗೆ ಕಾಣಿಸಿತು. ಆದ್ದರಿಂದ ಅವಳು ಪಶ್ಚಿಮ ದಿಕ್ಕಿನತ್ತ ಹೊರಟಳು. ಪಶ್ಚಿಮ ದಿಕ್ಕಿನಲ್ಲಿರುವ ದೇಶಗಳಲ್ಲಿಯ ಯಂತ್ರ ಕೈಗಾರಿಕೆ ಅವಳಿಗೆ ತುಂಬ ಆಕರ್ಶಕವಾಗಿ, ,ಮೋಹಕವಾಗಿ, ಲಾಭಕರವಾಗಿ ಕಾಣಿಸಿತು. ತನ್ನ ದೇಶದಲ್ಲಿದ್ದ ಗೃಹಕೈಗಾರಿಕೆಗಳು, ಗ್ರಾಮೋದ್ಯೋಗಗಳು ತುಚ್ಛವೆನಿಸಿದವು. ಅಲ್ಲಿಯ ಇಂಗ್ಲಿಷ್ ಭಾಷೆ ತನ್ನಲ್ಲಿಯ ಎಲ್ಲ ಭಾಷೆಗಳಿಗಿಂತ ಹೆಚ್ಚು ಸಮೃದ್ಧ, ಹೆಚ್ಚು ಪ್ರಭಾವಶಾಲಿ ಎಂದೆನಿಸಿತು. ಆ ದೇಶಗಳು ಹೊಂದಿದ್ದ ಶಸ್ತ್ರಾಸ್ತ್ರಗಳಂತೂ ಅಗತ್ಯವಾಗಿ ಬೇಕೇಬೇಕೆಂದು ಅನಿಸಹತ್ತಿತು. ಆ ದೇಶದಲ್ಲಿಯ ಜನ ಕಟ್ಟಿರುವ ಗಗನಚುಂಬಿ ಕಟ್ಟಡಗಳು, ವಿಶಾಲರಸ್ತೆಗಳು, ವಿಶ್ವವಿದ್ಯಾಲಯಗಳು ತನಗೂ ಬೇಕು. ಅವಿಲ್ಲದಿದ್ದರೆ ತಾನು ಹಿಂದುಳಿದವಳೆಂದು ಅನಿಸಿಕೊಳ್ಳುತ್ತೇನೆಂಬ ಭೀತಿ ಅವಳ ಮನಸ್ಸನ್ನಾವರಿಸಿತು. ಅಲ್ಲಿಯ ಜನ ಚಂದ್ರಲೋಕಕ್ಕೂ, ಮಂಗಳಗ್ರಹಕ್ಕೂ ಹೋಗುವಂತೆ ತನ್ನ ಮಕ್ಕಳೂ ಹೊಗಬೇಕೆಂದು ಇಚ್ಛೆ ಅವಳಲ್ಲಿ ಮೂಡಿತು. ಈ ಎಲ್ಲ ಪ್ರಕಾರದ ಇಚ್ಛೆಗಳೇ ಪುನಃ ತನ್ನನ್ನು ಕಟ್ಟಿಹಾಕಿವೆ, ಅಲ್ಲಿಯ ಭೋಗಜೀವನ ಶೈಲಿಯ ಅನುಕರಣೆಯೇ ತನ್ನ ಇಂದಿನ ದುರವಸ್ಥೆಗೆ ಕಾರಣ ಎಂದು ಅರಿವಾಗುತ್ತಿದೆ. ಪೂರ್ವ ದಿಕ್ಕಿನಲ್ಲಿ ಕಂಡ ಬೆಳಕಿಗೆ ಪಶ್ಚಿಮದಲ್ಲಿ ಕಂಡ ಹೊಂಬಣ್ಣಕ್ಕಿಂತ ಹೆಚ್ಚು ಮಹತ್ವ ಕೊಟ್ಟು ದೀರ್ಘಕಾಲ ಉಳಿಯುವ ಪೂರ್ವದ ಬೆಳಕಿನಲ್ಲಿ ಪಯಣ ಬೆಳೆಸಿದ್ದರೆ, ತನ್ನ ಮೂಲಸ್ವಭಾವ, ಸಂಸ್ಕೃತಿ, ಪ್ರಕೃತಿ, ಸ್ವಧರ್ಮ ಇವುಗಳ ಆಧಾರದ ಮೇಲೆ ಸರಿಯಾದ ನಿಲುಗಡೆಯ ಸ್ಥಾನವನ್ನು ತಲುಪಿ, ಅಲ್ಲಿಯೇ ಮನೆಮಾಡಿ ತನ್ನ ನೂರುಕೋಟಿ ಮಕ್ಕಳನ್ನು ಪೋಷಿಸಿ ಬೆಳೆಸಿದ್ದರೆ ಇವತ್ತಿನ ಅರವತ್ತನೇ ವಯಸ್ಸಿನಲ್ಲಿ ನನ್ನ ದೇಶವನ್ನು ಜಗತ್ತಿನ ನೂರೆಂಟು ದೇಶಗಳಲ್ಲಿಯೇ ಅಗ್ರ ಪಂಕ್ತಿಯಲ್ಲಿ ಇರುವಂತೆ ಮಾಡಬಹುದಾಗಿತ್ತು, ನಾಯಕತ್ವವನ್ನು ವಹಿಸಬಹುದಾಗಿತ್ತು, ಆದರ್ಶ ದೇಶವಾಗಬಹುದಿತ್ತು. ಸರ್ವೇಜನಾಃ ಸುಖಿನೋ

ಭವಂತು ಎಂಬ ನೀತಿಯನ್ನು ಜಗತ್ತಿನ ಎಲ್ಲ ದೇಶಗಳು ಸರ್ವಾನುಮತದಿಂದ ತಾವೇ ತಮ್ಮ ಇಷ್ಟದ ಮೇರೆಗೆ ಪಾಲಿಸುವಂತೆ ಪ್ರೇರಣೆಕೊಡಬಹುದಿತ್ತು. ಆದರೆ, ಅಯ್ಯೋ! "ನನಗೆ ಬಿಡುಗಡೆಯಾದ ಘಳಿಗೆಯ ಸಂತೋಷದ ಸಂಭ್ರಮದಲ್ಲಿ ಶಾಂತಚಿತ್ತಳಾಗಿ ಕುಳಿತು ಆಲೋಚನೆ ಮಾಡಿ ತೀರ್ಮಾನ ಕೈಗೊಳ್ಳದೆ ಕೇವಲ ಬರಿ ಸುಂದರ, ಥಳುಕಿನ, ಬೆಡಗಿನ ದೀರ್ಘಾವಧಿಯಲ್ಲದ ಪಶ್ಚಿಮದ ಬಣ್ಣದ ಬೆರಗಿಗೆ ಮನಸೋತು ಪಶ್ಚಿಮ ದಿಕ್ಕಿಗೆ ಪ್ರಯಾಣ ಬೆಳೆಸಿದೆ. ನನ್ನ ಕಾಲುಗಳ ಸಂಕೋಲೆ ಕಳಚಿಹೋಗಿ ಇನ್ನೂ ಮೂವತ್ತು ವರ್ಷಗಳಾಗಿರಲಿಲ್ಲ, ೧೯೮೦ನೇ ಸಂವತ್ಸರವಿರಬೇಕು ಆಗ ಥಟ್ಟನೆ ನನ್ನ ಪ್ರಯಾಣ ನಿಲ್ಲಿಸಿದೆ. ಪಶ್ಚಿಮ ದಿಕ್ಕಿನಲ್ಲಿ ಅದು ವರೆಗೆ ಕಾಣುತ್ತಿದ್ದ ಕೆಂಬಣ್ಣ ಕೃಷ್ಣವರ್ಣಕ್ಕೆ ತಿರುಗಿತು, ಸುತ್ತಮುತ್ತಲೆಲ್ಲ ಕತ್ತಲಾವರಿಸಿತು, ಮುಂದಿನ ದಾರಿಗಾಣಲಿಲ್ಲ, ಬುದ್ಧಿ ಮಂಕಾಯಿತು. ಆದ್ದರಿಂದ ಆ ಸ್ಥಳದಲ್ಲೇ ನಿಂತೆ. ಕದಲು ಆಗಲೇ ಇಲ್ಲ. ೧೭೪೭ರಲ್ಲಿ ನನ್ನ ಸಂಕೋಲೆಗಳು ಬಿಚ್ಚಿ ಹೋಗಿದ್ದರೂ ಇನ್ನೂರು ವರ್ಷಗಳ ಹಿಂದೆ ಇದ್ದ ನನ್ನ ಆ ಸಂಕೋಲೆಗಳು ನನಗೇ ಗೊತ್ತಿಲ್ಲದಂತೆ ನನ್ನ ಮಂಕುಬುದ್ಧಿಯ ಕಾರಣದಿಂದ ಪುನಃ ನನ್ನ ಕೈ-ಕಾಲುಗಳನ್ನು ಕಟ್ಟಿಹಾಕಿದವು. ಆದ್ದರಿಂದ ನಾನು ಅಂದಿನಿಂದ ಇಂದಿನವರೆಗೆ ಸುಮಾರು ಇಪ್ಪತ್ತು ವರ್ಷಗಳಿಂದ ನಿಂತಲ್ಲಿಯೇ ನಿಂತಿದ್ದೇನೆ. ಸುತ್ತಲೂ ಕತ್ತಲೆಯೇ ಇದೆ. ಬಿಡುಗಡೆಗೊಂಡಾಗ ಇದ್ದ ಕನಸುಗಳೆಲ್ಲ ಗಾಢಾಂಧಕಾರದಲ್ಲಿ ಕರಗಿ ಹೋಗಿವೆ. ನನ್ನ ನೂರು ಕೋಟಿ ಮಕ್ಕಳು ಜಗಳಾಡುತ್ತಿದ್ದಾರೆ. ರಕ್ತದ ಓಕುಳಿಯಾಡುತ್ತಿದ್ದಾರೆ. ೧೯೪೭ರಲ್ಲಿ ನನ್ನ ಬಿಡುಗಡೆಯಾಗಿದ್ದಾಗ ನನ್ನ ದೊಡ್ಡಮನೆ ಇಬ್ಭಾಗವಾಗಿ ಹೋಯಿತು. ಈಗ ಉಳಿದಿರುವ ಮನೆಯ ಭಾಗಗಳೂ ಇಬ್ಭಾಗವಾಗಿ ಹೊಗುವಂತೆ ನನ್ನ ಮಕ್ಕಳು ಮಾಡುತ್ತಿದ್ದಾರೆ. ಈಗಾಗಲೆ ೨೫ ರಾಜ್ಯಗಳಾಗಿವೆ. ಈ ಸಂಖ್ಯೆ ಸಾಲದೆಂಬಂತೆ ಗೂರ್ಖಾಲ್ಯಾಂಡ್, ತೆಲಂಗಾಣ, ವಿದರ್ಭ ಇತ್ಯಾದಿ ಇನ್ನೂ ೪-೫ ರಾಜ್ಯಗಳ ಬೇಡಿಕೆಗಾಗಿ ಹೋರಾಟ ನಡೆದಿದೆ. ಕಾಶ್ಮೀರ ಸಮಸ್ಯೆ ಬಗೆಹರಿಯದೆಯೇ ಉಳಿದಿದೆ. ಕಾಶ್ಮೀರ ಸಮಸ್ಯೆಯ ನಿಮಿತ್ತದಿಂದಾಗಿ ನನ್ನ ದೇಶ ತನ್ನ ಅದಾಯದ ಶೇಕಡಾ ೪೦ರಷ್ಟು ಹಣವನ್ನು ರಕ್ಷಣಾ ವ್ಯವಸ್ಥೆಗಾಗಿ ವ್ಯಯ ಮಾಡುತ್ತಿದೆ. ಬಾಂಗ್ಲಾದೇಶ ಅದರ ರಚನೆಯಾದಾಗಿನಿಂದಲೂ ನನ್ನ ತಲೆನೋವಾಗಿದೆ. ಪಾಕಿಸ್ತಾನದ ಕಪಿಮುಷ್ಠಿಯಿಂದ ಅದರ ಬಿಡುಗಡೆಗಾಗಿ ನಾನೇ ಕಾರಣವಾಗಿದ್ದರೂ ಆ ಬಗ್ಗೆ ಸ್ವಲ್ಪವೂ ಕೃತಜ್ಞತಾಭಾವವಿಲ್ಲದೆ ನನ್ನ ವಿರುದ್ಧವೇ ಭಯೋತ್ಪಾದಕರನ್ನು ಸಿದ್ಧಗೊಳಿಸಿ ನನ್ನ ಮನೆಯೊಳಗೇ ಕಳ್ಳತನದಿಂದ ತನ್ನ ದೇಶದವರನ್ನು ನುಗ್ಗಿಸುತ್ತಿದೆ. ಆದ್ದರಿಂದ ನನ್ನ ಮನೆಯ ಹಾಗೂ ನನ್ನ ಮಕ್ಕಳ ರಕ್ಷಣೆಗಾಗಿ ಸಾವಿರಾರು ಮೈಲಿ ಮುಳ್ಳುತಂತಿಯನ್ನು ಕೋಟ್ಯಾವಧಿ ಹಣ ಖರ್ಚುಮಾಡಿ ಹಾಕಬೇಕಾಗಿ ಬಂದಿದೆ. ದೇಶದಲ್ಲಿಯ ನನ್ನ ಮಕ್ಕಳಿಗೆ ಎರಡುಹೊತ್ತಿನ ಸರಿಯಾದ ಊಟವಿಲ್ಲದಿದ್ದರೂ, ನೆತ್ತಿಯ ಮೇಲೆ ಸರಿಯಾದ ಸೂರಿರದಿದ್ದರೂ, ರೈತರು ಮತ್ತು ನೇಕಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೂ ನನ್ನ ಸರ್ಕಾರ ಅದು ಕೇಂದ್ರದಲ್ಲಾಗಿರಲಿ, ರಾಜ್ಯದಲ್ಲಾಗಿರಲಿ ಭ್ರಷ್ಟತೆಯ ಸುಳಿಯಲ್ಲಿ ಸಿಕ್ಕಿಹಾಕಿಕೊಂಡು ವಿಲಿವಿಲಿ ಒದ್ದಾಡುತ್ತಿದೆ. ಸ್ವಾತಂತ್ರ್ಯ ಬಂದಾಗಿನಿಂದ ಭ್ರಷ್ಟಾಚಾರ ನಿರ್ಮೂಲನೆಯ ಪ್ರಯತ್ನ ನಡೆದಿದ್ದರೂ ಸರ್ಕಾರಗಳು ಅಭಿವೃದ್ಧಿ ಯೊಜನೆಗಳನ್ನು ಹಾಕಿಕೊಂಡಷ್ಟೂ ಅದು ವ್ಯಾಪಕವಾಗಿ

ಬೆಳೆಯುತ್ತಿದೆ. ಜಗತ್ತಿನಲ್ಲಿ ಭ್ರಷ್ಟಾಚಾರದ ವಿಷಯದಲ್ಲಿ ಭಾರತ ಮೇಲಿನ ಸ್ಥಾನದಲ್ಲಿದೆ. ದುರಂತವೆಂದರೆ ಅಭಿವೃದ್ಧಿ ಯೋಜನೆಗಳೇ ಭ್ರಷ್ಟಾಚಾರದ ಮೂಲಗಳಾಗಿವೆ. ಕೋಲು ಮುರಿದರೂ ಹಾವು ಸಾಯಲಿಲ್ಲವೆಂಬಂತೆ ಭ್ರಷ್ಟ ಅಧಿಕಾರಿಗಳನ್ನು ಹಿಡಿದರೂ ಭ್ರಷ್ಟಾಚಾರ ಮಾತ್ರ ರಾಜಾರೋಷವಾಗಿ ಹೆದ್ದಾರಿಯಲ್ಲಿ ಮುನ್ನಡೆದಿದೆ! ಇಂದು ನಗರಗಳಲ್ಲಿ ನಿರ್ಮಿತವಾಗಿರುವ ಬಹುಪಾಲು ಕಟ್ಟಡಗಳೆಲ್ಲ ದರ್ಮಮಾರ್ಗದಿಂದ ಸಂಪಾದಿಸಿ ಕಟ್ಟಿರುವ ಕಟ್ಟಡಗಳಾಗಿಲ್ಲ. ಆತ್ಮ ವಂಚನೆ ಮಾಡಿಯೋ, ಸರ್ಕಾರಕ್ಕೆ ವಂಚನೆಮಾಡಿಯೋ ಸಂಪಾದಿಸಿ ಕಟ್ಟಿದವುಗಳಾಗಿವೆ. ಈಗ ಈ ಮಹಾನಗರಗಳಲ್ಲಿ ಸಂಚಾರವೇ ಅಸಾಧ್ಯವಾಗಿದೆ. ಮೊದಲು ಮೂರು-ನಾಲ್ಕು ಕಿಲೋಮೀಟರ್ ದೂರ ಕ್ರಮಿಸಲು ಅರ್ಧಗಂಟೆ ಸಾಕಾಗುತ್ತಿತ್ತು. ಈಗ ಮೂರುನಾಲ್ಕು ತಾಸು ಬೇಕಾಗುತ್ತದೆ. ನಗರಗಳಲ್ಲಿ ಭೂಮಾರ್ಗ, ಸೇತುವೆ ಮಾರ್ಗಗಳನ್ನು ನಿರ್ಮಿಸಲಾಗುತ್ತಿದೆ. ಇದೆಲ್ಲ ಸಾಲದೆಂದು ಮೆಟ್ರೋ ರೈಲುಗಳನ್ನು ಓಡಿಸಲಾಗುತ್ತಿದೆ. ಇಂಧನದ ಬೆಲೆ ದಿನೇ ದಿನೇ ದುಬಾರಿಯಾಗುತ್ತಿದ್ದರೂ ವಾಹನಗಳ ಸಂಖ್ಯೆ ಮಾತ್ರ ಹೆಚ್ಚಾಗುತ್ತಲೇ ಇದೆ. ಇದರ ಪರಿಣಾಮವಾಗಿ ವಾಯುಪ್ರದೂಷಣ ಉಂಟಾಗುತ್ತಿದೆ. ನಗರಗಳಲ್ಲಿಯ ಭೂ ಬೇಡಿಕೆ ಹೆಚ್ಚಾಗಿ, ಅದರ ಬೆಲೆ ಗಗನಕ್ಕೆ ಮುಟ್ಟುತ್ತಿದೆ. ಕಳ್ಳತನದಿಂದ ಭೂ ಕಬಳಿಕೆಯಾಗುತ್ತಿದೆ. ನಗರಗಳಿಗೆ ಹಳ್ಳಿಗಳಿಂದ ಜನ ವಲಸೆ ಹೋಗುತ್ತಿದ್ದಾರೆ. ಆಯಾ ರಾಜ್ಯದ ಭಾಷೆ ಆ ರಾಜ್ಯದ ರಾಜಧಾನಿಯಲ್ಲಿ ಇಲ್ಲವಾಗುತ್ತಿದೆ. ಎಲ್ಲವೂ ಇಂಗ್ಲಿಷ್‌ಮಯ, ಎಚ್‌ಐವಿ, ಏಡ್ಸ್, ಕ್ಯಾನ್ಸರ್, ಹೃದಯಾಘಾತ, ವೇಶ್ಯಾವೃತ್ತಿ ಇತ್ಯಾದಿಯೆಲ್ಲವೂ ಹೆಚ್ಚಾಗುತ್ತಿದೆ. ಕೊಲೆಗಳು, ದರೋಡೆಗಳು, ಆತ್ಮಹತ್ಯಗಳು ಹೆಚ್ಚುತ್ತಿವೆ. ಇಂಥ ನಗರಗಳನ್ನು ಆಧುನಿಕ ಸಮಾಜದ, ಅಭಿವೃದ್ಧಿಗೊಂಡ ಸಮಾಜದ ಕುರುಹುಗಳೆಂದು ಅಭಿಮಾನದಿಂದ ಸಾರಲಾಗುತ್ತಿದೆ. ೨೦೨೦ರ ವೇಳೆಗೆ ದೇಶದ ಜನಸಂಖ್ಯೆಯಲ್ಲಿ ಶೇಕಡ ೮೦ ರಷ್ಟು ಜನರು ನಗರಗಳಲ್ಲಿರುವಂತಾಗಬೇಕೆಂದು ಕೇಂದ್ರ ಸರ್ಕಾರದ ನೀತಿಯಾಗಿದೆ. ಅಂದರೆ ಗ್ರಾಮಗಳ ಶವಗಳ ಮೇಲೆ ನಗರಗಳ ನಿರ್ಮಾಣ.

ಇನ್ನು ಆಹಾರದ ವಿಷಯ. ಇದು ಸಹಜ ಸಂಪೂರ್ಣ ವಿಕೇಂದ್ರಿತ ವ್ಯವಸ್ಥೆ. ಅಂದರೆ ಆಯಾ ಪ್ರದೇಶದಲ್ಲಿಯ ರೈತರು ವಿವಿಧ ಬಗೆಯ ಆಹಾರ ಧಾನ್ಯ, ತರಕಾರಿ ಇತ್ಯಾದಿ ಬೆಳೆಯುತ್ತಾರೆ. ಅದನ್ನು ಆ ಪ್ರದೇಶದ ಜನ ಖರೀದಿಸಿ ಜೀವನ ನಡೆಸುತ್ತಾರೆ. ಈ ಪದ್ಧತಿ ಅನೂಚಾನವಾಗಿ ಬಂದದ್ದು. ಆದರೆ ಸ್ವಾತಂತ್ರ್ಯ ಬಂದ ಮೇಲೆ ಸರ್ಕಾರಗಳು ಈ ವ್ಯವಸ್ಥೆಯಲ್ಲಿ ಕೈ ಹಾಕಿದವು. ಅದರ ಪರಿಣಾಮವಾಗಿ ತಮ್ಮ ದೈನಂದಿನ ಆಹಾರಕ್ಕೂ ಜನತೆ ಸರ್ಕಾರಗಳನ್ನೇ ಅವಲಂಬಿಸಬೇಕಾಗಿ ಬಂತು. ಎಲ್ಲೆಲ್ಲೂ ಆಹಾರಕ್ಕಾಗಿ ಗೊಂದಲ, ಹಾಹಾಕಾರ ಪ್ರಾರಂಭವಾಯಿತು. ಪರಿಸ್ಥಿತಿಯನ್ನು ನಿಯಂತ್ರಿಸಲು ಸರ್ಕಾರ ದೇಶದಲ್ಲಿಯ ಜನರನ್ನು ಬಡತನ ರೇಖೆಯ ಕೆಳಗಿರುವವರು, ರೇಖೆಯ ಮೇಲಿರುವವರು, ಈ ಯಾವುದೇ ವಿಭಾಗಕ್ಕೆ ಸೇರದ ಮಧ್ಯಮವರ್ಗದವರು ಎಂದೆಲ್ಲ ವಿಭಜಿಸಿ ಇಡೀ ಜನ ಸಮುದಾಯದ ಶಾಂತಿ, ನೆಮ್ಮದಿಯನ್ನೇ ಭಂಗಮಾಡಿದವು. ಒಂದು ಸಮುದಾಯ ಇನ್ನೊಂದು ಸಮುದಾಯದ ವಿರುದ್ಧ ಹೋರಾಟ ನಡೆಸುವಂತೆ ಮಾಡಿದವು. ಜನರನ್ನು ಸುಳ್ಳರನ್ನಾಗಿ, ಕಳ್ಳರನ್ನಾಗಿ ಮಾಡಿದವು. ರಾಷ್ಟ್ರೀಯ ಆರ್ಥಿಕ ಸಂಶೋಧನಾ ಸಂಸ್ಥೆ (ಎನ್.ಸಿ.ಎ.ಇ.ಆರ್) ಪ್ರಕಾರ

ದೇಶದಲ್ಲಿ ಎರಡು ಕೋಟಿ ಬೋಗಸ್ ರೇಷನ್ ಕಾರ್ಡುಗಳಿವೆ. ಅಂದರೆ ದೇಶದಲ್ಲಿ ಅಷ್ಟು ಸುಳ್ಳರು, ಕಳ್ಳರು ಇದ್ದಂತಾಯಿತು. ಸರ್ಕಾರಗಳ ಇಂದಿನ ದುರ್ಬಲ ಆರ್ಥಿಕ ಸ್ಥಿತಿಯನ್ನು ಗಮನಿಸಿದರೆ ಆಹಾರ ವಿತರಣಾ ವ್ಯವಸ್ಥೆ ಎಂದೂ ಸಮಾಧಾನಕರವಾಗಿ ಮತ್ತು ಯಶಸ್ವಿಯಾಗಿ ನಡೆಯಲಾರದೆಂದು ಗೊತ್ತಾಗುತ್ತದೆ. ಈ ಸಮಸ್ಯೆಯನ್ನು ಇನ್ನಷ್ಟು ಕ್ಲಿಷ್ಟ ಮಾಡುವುದಕ್ಕೆ ಕಾರಣವಾಗುವಂಥ ಮಳೆಯ ಅಭಾವ, ಬೆಳೆಗಳ ಕಡಿಮೆ ಇಳುವರಿ, ಕೃಷಿ ಭೂ ಪ್ರದೇಶದ ವ್ಯಾಪ್ತಿ ಕಡಿಮೆಗೊಳ್ಳುತ್ತಿರುವಿಕೆ, ರಾಸಾಯನಿಕ ಗೊಬ್ಬರಗಳ ಅಭಾವ ಮುಂತಾದ ಸಮಸ್ಯೆಗಳು ಇವೆ. ಅಲ್ಲದೆ, ೨೦೦೯-೧೦ನೇ ಸಾಲಿನ ಕೇಂದ್ರ ಬಜೆಟ್ ದೇಶದ ಎಲ್ಲ ಆರ್ಥಿಕ ರಂಗಗಳ ಮೇಲೆ ದುಷ್ಪರಿಣಾಮ ಬೀರಲಿದೆ. ಈ ಸಾಲಿನ ಬಜೆಟ್ ನಾಲ್ಕು ಲಕ್ಷ ಐವತ್ತು ಸಾವಿರ ಕೋಟಿ ರುಪಾಯಿಗಳ ಖೋತಾ ಹೊಂದಿದೆ. ಈ ಖೋತಾ ಭರಿಸಲಿಕ್ಕಾಗಿ ಪ್ರಜೆಗಳು ತಮ್ಮ ಮೂಗಿಗೆ ಕವಡೆ ಕಟ್ಟಿ ದುಡಿಯಬೇಕಾಗಬಹುದು ಮತ್ತು ಹೊಟ್ಟೆಯ ಮೇಲೆ ತಣ್ಣೀರಿನ ಬಟ್ಟೆ ಹಾಕಿಕೊಂಡು ಮಲಗಬೇಕಾಗಬಹುದು. ಈಗಾಗಲೇ ದೇಶದ ಪ್ರತಿಯೊಬ್ಬ ಪ್ರಜೆಯ ತಲೆಯ ಮೇಲೆ, ರಾಜ್ಯದ ಸಾಲ ಹನ್ನೊಂದು ಸಾವಿರಕ್ಕಿಂತ ಹೆಚ್ಚು ಇದೆ. ಕೇಂದ್ರ ಸರ್ಕಾರದ ಸಾಲ ಮೂವತ್ತೊಂದು ಸಾವಿರ. ಈ ಸಾಲ ಹೆಚ್ಚುತ್ತಾ ಹೋಗುವುದರಲ್ಲಿ ಸಂದೇಹವಿಲ್ಲ. ಜಾಗತಿಕ ಅರ್ಥ ವ್ಯವಸ್ಥೆಯೂ ಇಳಿಮುಖವಾಗಿದೆ. ದೇಶ ಅತ್ಯಂತ ಕಠಿಣತಮವಾದ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿದ್ದರೂ ಕೇಂದ್ರ ಸರ್ಕಾರದ ಅರ್ಥಮಂತ್ರಿ ಪ್ರಣಬ್ ಮುಖರ್ಜಿಯವರು ಮಾತ್ರ ಎಂದಿನಂತೆ ತಮ್ಮ ಮೂರ್ಖ ಕಲ್ಪನೆಯ ಸ್ವರ್ಗದಲ್ಲಿಯೇ ಇದ್ದಾರೆ. ಅವರು ಕೊಡುವ ಪೊಳ್ಳು ಆಶ್ವಾಸನೆಗಳಿಂದ ದೇಶದ ಜನ ಹೊಟ್ಟೆ ತುಂಬಿಸಿಕೊಳ್ಳಬೇಕಾಗಿದೆ. ಗಾಯದ ಮೇಲೆ ಬರೆ ಎಳೆಯುವಂತೆ ಆರು ಸಾವಿರಕ್ಕೂ ಹೆಚ್ಚು ಪದಾರ್ಥಗಳ ಮೇಲಿನ ರಫ್ತು ಸುಂಕವನ್ನು ಕಡಿಮೆ ಮಾಡ ಹೊರಟಿದೆ ಸರ್ಕಾರ. ಈ ನೀತಿಯಿಂದಾಗಿ ದೇಶದ ಆಂತರಿಕ ಕೈಗಾರಿಕಾ ಮತ್ತು ವ್ಯವಸಾಯಿಕ ಉತ್ಪನ್ನಗಳ ಮೇಲೆ ಭೀಕರ ದುಷ್ಪರಿಣಾಮ ಉಂಟಾಗಲಿದೆ. ಈಗಾಗಲೇ ಆಹಾರ ಪದಾರ್ಥಗಳ ಬೆಲೆ ಬಡವರ ಮತ್ತು ಜನಸಾಮಾನ್ಯರ ಕೈಗೆಟುಕದ ಎತ್ತರಕ್ಕೆ ಹೋಗಿವೆ. ಬೆಲೆಯ ಏರಿಕೆಯನ್ನು ನಿಲ್ಲಿಸಲು ಸರ್ಕಾರಗಳಿಗೆ ಸಾಧ್ಯವಾಗುತ್ತಿಲ್ಲ. ಕೇಂದ್ರ ಸರ್ಕಾರವೇ ತಿಳಿಸಿರುವ ಮಾಹಿತಿಯ ಪ್ರಕಾರ ಇಂದು ಆರು ಕೋಟಿಗೂ ಹೆಚ್ಚು ಜನರು ದಿನವೊಂದಕ್ಕೆ ಕೇವಲ ಇಪ್ಪತ್ತು ರುಪಾಯಿಗಳನ್ನು ಮಾತ್ರ ಖರ್ಚುಮಾಡುವ ಸ್ಥಿತಿಯಲ್ಲಿದ್ದಾರೆ. ಅಂದರೆ ಜನಸಾಮಾನ್ಯರ ಆದಾಯ ಹಾಗೂ ಆಹಾರ ಧಾನ್ಯಗಳ ಬೆಲೆ ಇವುಗಳ ಮಧ್ಯ ಭೂಮಿ-ಆಕಾಶದಷ್ಟು ಅಂತರ ಉಂಟಾಗಿದೆ. ಇಂಥ ದೊಡ್ಡ ಅಂತರವನ್ನು ಇಷ್ಟೇ ದೊಡ್ಡ ಅಂತರದ ಖೋತಾ ಬಜೆಟ್ ಎಂದಾದರೂ ಕಡಿಮೆಮಾಡಬಲ್ಲದೆ? ಈ ವಿಚಾರವನ್ನು ಆಲೋಚಿಸಿದಷ್ಟೂ ತಲೆ ಸುತ್ತುತ್ತದೆ.

ರೋಂ ನಗರಕ್ಕೆ ಬೆಂಕಿ ಬಿದ್ದಾಗ ಆ ಸಾಮ್ರಾಜ್ಯದ ಚಕ್ರವರ್ತಿ ವೀಣೆ ಬಾರಿಸುತ್ತ ಕಾಲ ಕಳೆಯುತ್ತಿದ್ದನಂತೆ. ಅದೇ ರೀತಿ ಇಂದು ನಮ್ಮ ಜನತಾ ಪ್ರತಿನಿಧಿಗಳು ವರ್ತಿಸುತ್ತಿದ್ದಾರೆ. ಲೋಕಸಭಾ ಸದಸ್ಯರು, ವಿಧಾನಸಭಾ ಸದಸ್ಯರು ತಮ್ಮ ವೇತನ, ದಿನಭತ್ಯ, ನಿವೃತ್ತಿವೇತನ, ಪ್ರವಾಸ ಭತ್ಯ ಇತ್ಯಾದಿಗಳನ್ನು ಹೆಚ್ಚಿಸಿಕೊಳ್ಳುತ್ತಲೇ ಹೋಗುತ್ತಿದ್ದಾರೆ. ಅವರು ಒಂದು ದಿನಕ್ಕೆ ಒಂದು ಸಾವಿರ ರುಪಾಯಿಗೂ

ಬಡ್ತಿ ಪಡೆದರು. ದುಃಸ್ವಪ್ನದಂತಿರುವ ಅವರ ಈ 'ಯೋಜನೆ'ಯಿಂದಾಗಿ ಸಾವಿರಾರು ಎಕರೆ ಭೂಮಿಯಲ್ಲಿನ ಭಾರತದ ನೈಸರ್ಗಿಕ ಸಂಪತ್ತನ್ನು ಲೂಟಿ ಹೊಡೆಯಲು ಕಾರ್ಪೊರೇಟ್ ಕಂಪನಿಗಳಿಗೆ ಈಗ ಅನುವು ಮಾಡಿಕೊಡಲಾಗಿದೆ. ಅಂದರೆ ಸ್ವಾತಂತ್ರ್ಯ ಬಂದನಂತರದ ಭೂಸುಧಾರಣೆ ಯೋಜನೆಗಳನ್ನು ಹಿಮ್ಮುಖವಾಗಿಸಲಾಗಿದೆ.

ದಿಕ್ಕು, ಉದ್ದೇಶ ಇಲ್ಲದಂತಾಗಿರುವ ಸರ್ಕಾರದ ಬೆಂಬಲದೊಂದಿಗೆ ಈಗಾಗಲೇ ಅಂತರರಾಷ್ಟ್ರೀಯ ಕಂಪನಿಗಳು ಕಾಡು, ಬೆಟ್ಟ ಮತ್ತು ಜಲ ವ್ಯವಸ್ಥೆಯನ್ನು ನಾಶಪಡಿಸುತ್ತಿದ್ದು 'ಪರಿಸರದ ಮಾರಣಹೋಮ' ಮಾಡುತ್ತಿವೆ. ಪೂರ್ವ ಭಾರತದಲ್ಲಿ ಬಾಕ್ಸೈಟ್ ಮತ್ತು ಕಬ್ಬಿಣದ ಅದಿರಿಗಾಗಿ ನಡೆಯುತ್ತಿರುವ ಗಣಿಗಾರಿಕೆ ಅಲ್ಲಿನ ಪರಿಸರ ವ್ಯವಸ್ಥೆಯನ್ನು ನಿರ್ನಾಮ ಮಾಡಿದೆಯಲ್ಲದೆ ಫಲವತ್ತಾಗಿದ್ದ ಭೂಮಿಯನ್ನು ಮರಳುಗಾಡಾಗಿಸುತ್ತಿದೆ. ಇನ್ನು ಹಿಮಾಲಯದಲ್ಲಿ ನೂರಾರು ಅಣೆಕಟ್ಟುಗಳನ್ನು ನಿರ್ಮಿಸುವ ಉದ್ದೇಶವಿದೆ; ಅದರಿಂದುಂಟಾಗುವ ಮಹಾವಿನಾಶದ ಬಗ್ಗೆ ಕಿಂಚಿತ್ತೂ ಯೋಚಿಸಿದಂತಿಲ್ಲ. ಇನ್ನು ಬಯಲು ಪ್ರದೇಶಗಳಲ್ಲಿ ಪ್ರವಾಹವನ್ನು ತಡೆಯುವ ಉದ್ದೇಶದಿಂದ ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಲಾಗಿದೆಯಾದರೂ ಅವುಗಳಿಂದಾಗಿಯೇ ನದಿತಳಗಳೇ ಏರಿದ್ದು ಪ್ರವಾಹಗಳು ಹೆಚ್ಚಾಗಿವೆ, ಕೃಷಿ ಭೂಮಿನಾಶವಾಗಿ ಲಕ್ಷಾಂತರ ಜನರ ಬದುಕೇ ನುಚ್ಚು ನೂರಾಗಿದೆ. ಗಂಗೆ ಸೇರಿದಂತೆ ಭಾರತದ ಬಹಳಷ್ಟು ಪವಿತ್ರ ನದಿಗಳು ಇವತ್ತು ನೀರಿಗಿಂತ ಹೆಚ್ಚಾಗಿ ಕೊಳಚೆಯನ್ನೇ ಹರಿಸುವ ಅಪವಿತ್ರ ಚರಂಡಿಗಳಾಗಿವೆ.

ನದಿಗಳ ನೀರು ಸಮುದ್ರಕ್ಕೆ ಹರಿದು 'ವೇಸ್ಟ್' ಆಗಬಾರದೆಂಬ ಕಲ್ಪನೆಯಲ್ಲಿ ಸುಪ್ರೀಮ್ ಕೋರ್ಟ್ ಭಾರತದ ನದಿಗಳ ಜೋಡಣೆ ಯೋಜನೆಗೆ ಹಸಿರು ನಿಶಾನೆ ತೋರಿಸಿತು. ಕುಡಿಯುವ ನೀರನ್ನು ಸರಬರಾಜು ಮಾಡುವ ಪೈಪ್‌ಗಳನ್ನು ಜೋಡಿಸುವಷ್ಟು ಸುಲಭವಲ್ಲ ಈ ಯೋಜನೆ. ಇದಕ್ಕಾಗಿ ಬೆಟ್ಟಗಳನ್ನು ಅಗಿಯಬೇಕು, ಕಾಡುಗಳನ್ನು ಕತ್ತರಿಸಬೇಕು, ಸಹಜವಾಗಿ ನಿರ್ಮಿತವಾಗಿರುವ ನದಿ ಪಾತ್ರಗಳನ್ನೇ ಬದಲಾಯಿಸಬೇಕು, ನದೀ ಮುಖಜ ಭೂಮಿಯನ್ನು ಮತ್ತು ನದೀ ಮುಖಗಳನ್ನು ನಾಶಪಡಿಸಬೇಕು. ಅಂದರೆ ಈ ಉಪಖಂಡದ ಇಡೀ ಪರಿಸರವನ್ನೇ ನಿರ್ನಾಮ ಮಾಡಬೇಕು. (ಅಂದಹಾಗೆ ಇಂತಹ ತೀರ್ಪನ್ನು ನೀಡಿದ್ದ ನ್ಯಾಯಾಧೀಶ ಬಿ.ಎನ್. ಕ್ರಿಪಾಲ್ ಅವರು ನಿವೃತ್ತಿ ಹೊಂದಿದ ನಂತರ ಕೋಕಕೋಲಾ ಕಂಪನಿಯ ಪರಿಸರ ಮಂಡಳಿಯನ್ನು ಸೇರಿದರು!)

ಮುಕ್ತ ಮಾರುಕಟ್ಟೆಯ ಆರ್ಥಿಕ ನೀತಿಯಿಂದಾಗಿ ಆಹಾರ ಧಾನ್ಯಗಳ ಬದಲಾಗಿ ವಾಣಿಜ್ಯ ಕೃಷಿಗೆ ಒತ್ತು ನೀಡಲಾಗಿದ್ದು ಇದರ ಪರಿಣಾಮವಾಗಿ ಭೂಮಿ ನಾಶವಾಗಿದೆ, ಅಂತರ್ಜಲ ಕಲ್ಮಶಗೊಂಡಿದೆ. ರೈತರನ್ನು ಸಾಲದ ಬೇಗುದಿಯಲ್ಲಿ ಸಿಲುಕಿಸಿದೆ. ಕಳೆದ ಕೆಲ ವರ್ಷಗಳಲ್ಲಿ ೧,೮೦,೦೦೦ಕ್ಕಿಂತಲೂ ಹೆಚ್ಚು ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಒಂದೆಡೆ ಸರ್ಕಾರದ ಉಗ್ರಾಣಗಳಲ್ಲಿ ಆಹಾರ ಧಾನ್ಯಗಳು ತುಂಬಿತುಳುಕುತ್ತಾ ಅಂತಿಮವಾಗಿ ಹುಳುತು ಹೋಗುತ್ತಿದ್ದರೆ ಇನ್ನೊಂದೆಡೆ ಹಸಿವು ಮತ್ತು ಅಪೌಷ್ಠಿಕತೆ ದೇಶದೆಲ್ಲಡೆ ತಾಂಡವವಾಡುತ್ತಿದೆ. ಇಂತಹ ಸಂದರ್ಭದಲ್ಲಿ ಶೇ.೯ ಅಭಿವೃದ್ಧಿ ದರವೇ ವಿನಾಶಕಾರಿಯಾಗಿ ಕಾಣಿಸುತ್ತಿದೆ. ಏಕೆಂದರೆ ಇದು ಕ್ಯಾನ್ಸರ್‌ನಂತಹ

ಅಭಿವೃದ್ಧಿಯಾಗಿದ್ದು ಇದು ಹೆಚ್ಚು ಬೆಳದಂತೆ ಸಾವು ಸನ್ನಿಹಿತವಾಗುತ್ತವೆ.

ಊಳಿಗಮಾನ್ಯ ವ್ಯವಸ್ಥೆ ಮತ್ತು ಜಾತಿ ಪದ್ಧತಿ ಎಂಬ ಎರಡು ಹೊರೆಗಳಿಂದಾಗಿ ಕೊಳೆಯುತ್ತಿದ್ದ ಒಂದು ಪ್ರಾಚೀನ ಸಮಾಜವನ್ನು ಒಂದು ದೊಡ್ಡ ಮಂಥನಿಯಲ್ಲಿ ಹಾಕಿ ಕದಡಿದಂತಾಗಿದೆ. ಆದರೆ ಮಂಥನದಲ್ಲಿ ಹಳೆಯ ಅಸಮಾನತೆಗಳ ಬಲೆ ಹರಿದು ಕೆಲವು ಬದಲಾವಣೆಗಳಾಗಿದ್ದರೂ ಹೆಚ್ಚಾಗಿ ಹಿಂದಿನ ಮೌಲ್ಯಗಳನ್ನೇ ಗಟ್ಟಿಗೊಳಿಸಿದೆ. ಹೀಗಾಗಿ ಈಗ ಈ ಹಳೇ ಸಮಾಜ ಹೆಪ್ಪುಗಟ್ಟಿದ್ದು ಮೇಲೆ ದಟ್ಟವಾದ ಕೆನೆ ಸೃಷ್ಟಿಯಾಗಿದ್ದರೆ ಅದಕ್ಕಿಂತ ಹೆಚ್ಚಿನ ಪ್ರಮಾಣದ ನೀರು ಆ ಕೆನೆಯ ಕೆಳಗೆ ನಿಂತಿದೆ. ಆ ಕೆನೆಯೇ ಭಾರತದ ಮಾರುಕಟ್ಟೆಯಲ್ಲಿರುವ ಕಾರ್, ಮೊಬೈಲ್ ಫೋನ್, ಕಂಪ್ಯೂಟರ್ ಮತ್ತು ವ್ಯಾಲೆಂಟೈನ್ ದಿನಾಚರಣೆಯ ಕಾರ್ಡುಗಳ ಗ್ರಾಹಕರು. ಆದರೆ ಈ ಕೆನೆಯಡಿ ಇರುವ ನೀರು ಅಷ್ಟು ಮುಖ್ಯವಲ್ಲ. ಅದನ್ನು ಅಲ್ಲೇ ತುಳುಕಾಡಿಸಬಹುದು, ಯಾವುದೋ ಒಂದು ತೊಟ್ಟಿಯಲ್ಲಿ ಶೇಖರಿಸಿಡಬಹುದು, ಅಂತಿಮವಾಗಿ ಅದನ್ನು ಹರಿಸಿ ಸುಮ್ಮನಾಗಬಹುದು.... ಹಾಗೆಂದು ಸೂಟುಬೂಟಿನ ಜನ ಭಾವಿಸಿದ್ದಾರೆ. ಆದರೆ ಭಾರತದ ಒಳನಾಡುಗಳಾದ ಛತ್ತೀಸಗಢ, ಜಾರ್ಖಂಡ್, ಒರಿಸ್ಸಾ ಮತ್ತು ಪಶ್ಚಿಮ ಬಂಗಾಳದಲ್ಲಿ ಉಗ್ರ ಆಂತರಿಕ ಯುದ್ಧಗಳು ಪ್ರಾರಂಭವಾಗುತ್ತವೆಂದು ಅವರು ಯೋಚಿಸಿರಲಿಲ್ಲ.

ಈಗ ತಾನೆ ಸುಮಾರು ಎರಡು ಬಿಲಿಯನ್ ಡಾಲರ್‌ಗಳ ವೆಚ್ಚದಲ್ಲಿ ೨೦೦೯ರ ಚುನಾವಣೆಗಳು ಅಂತ್ಯಗೊಂಡಿವೆ. ಅದು ಅಮೆರಿಕದ ಚುನಾವಣಾ ಬಜೆಟ್‌ಗಿಂತ ದೊಡ್ಡ ಪ್ರಮಾಣದ್ದು. ಕೆಲ ಮಾಧ್ಯಮಗಳ ವರದಿಗಳ ಪ್ರಕಾರ ಕಳೆದ ಚುನಾವಣೆಗಳಲ್ಲಿ ನಿಜವಾಗಲೂ ವೆಚ್ಚವಾಗಿದ್ದು ಹತ್ತಿರಹತ್ತಿರ ಹತ್ತು ಬಿಲಿಯನ್ ಡಾಲರ್‌ಗಳಷ್ಟು. ಅಷ್ಟೊಂದು ಹಣ ಅದೆಲ್ಲಿಂದ ಬಂತು ಎಂದು ಕೇಳಬಹುದೇ?

ಕಾಂಗ್ರೆಸ್ ಮತ್ತದರ ಯುಪಿಎ ಮಿತ್ರಪಕ್ಷಗಳು ಬಹುಮತ ಪಡೆದಿವೆ. ಅಂದಹಾಗೆ ಈ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಸ್ವತಂತ್ರ್ಯ ಅಭ್ಯರ್ಥಿಗಳುಲ್ಲಿ ಶೇ.೯೦ ಮಂದಿ ಸೋತರು. ಅದರರ್ಥ ಇಷ್ಟೇ: ಅಭ್ಯರ್ಥಿಯ ಹಿಂದೆ ಪ್ರಾಯೋಜಕರು ಇಲ್ಲದಿದ್ದರೆ ಗೆಲ್ಲುವುದು ಕಷ್ಟ. ಮಾತ್ರವಲ್ಲ ಸ್ವತಂತ್ರ ಅಭ್ಯರ್ಥಿಗಳಿಗೆ ಮತಗಳಿಗಾಗಿ ಟಿವಿ ಮತ್ತು ಹಣ ನೀಡಲಾಗುವುದಿಲ್ಲ, ಕಡಿಮೆ ದರದಲ್ಲಿ ಅಕ್ಕಿ ಹಂಚುತ್ತೇನೆ ಎಂದು ಹೇಳಲಾಗುವುದಿಲ್ಲ ಹಾಗೆಯೇ ಅಸಹ್ಯ ಹುಟ್ಟಿಸುವಂತಹ ದಾನಗಳನ್ನೂ ಚುನಾವಣೆ ಎಂಬ ಪ್ರಹಸನದಲ್ಲಿ ಮಾಡಲಾಗುವುದಿಲ್ಲ.

ಆದರೆ ಚುನಾವಣಾ ಫಲಿತಾಂಶ ಎಂಬ ಲೆಕ್ಕಾಚಾರದ ಹಿಂದಿರುವ ವಾಸ್ತವಾಂಶಗಳನ್ನು ಗಮನಿಸಿದಾಗ 'ಬಹುಮತ' ಎಂಬ ಪದಪ್ರಯೋಗ ಕಪಟವಾಗಿ ಕಾಣಿಸುತ್ತದೆಯಲ್ಲದೆ ಅದು ಅರ್ಥಹೀನ ಎಂದೂ ಗೊತ್ತಾಗುತ್ತದೆ. ಉದಾಹರಣೆಗೆ ಕಳೆದ ಚುನಾವಣೆಯಲ್ಲಿ ಯುಪಿಎ ಪಡೆದದ್ದು ದೇಶದ ಜನಸಂಖ್ಯೆಯ ಕೇವಲ ಶೇ.೧೦.೩ ಮತಗಳನ್ನು!

ರಾಜಕೀಯ ಪಕ್ಷಗಳ ನಡುವೆಯೇ ಒಮ್ಮತ ಇದ್ದುದರಿಂದ 'ರಚನಾತ್ಮಕ ಸಹಯೋಗ'ದ ಬಗ್ಗೆ ಹುರುಪುಗೊಂಡ ಕಾರ್ಪೊರೇಟ್ ಕಂಪನಿಗಳು ಕಳೆದ ಚುನಾವಣೆಗಳ ಬಗ್ಗೆ ಉತ್ಸುಕವಾಗಿದ್ದವು. ತಮ್ಮ ಲೂಟಿಗೆ ಪ್ರಜಾಸತ್ತಾತ್ಮಕ ಮುದ್ರೆ

ನಮ್ಮವೇ ಆಗಿದ್ದ ಮೌಲ್ಯಗಳನ್ನು ಈಗ ಪಾಶ್ಚಾತ್ಯರಿಂದ ಕಲಿಯಬೇಕಾಗಿ ಬಂತಲ್ಲ!

– ಎನ್.ಆರ್.ನಾರಾಯಣ ಮೂರ್ತಿ
(ಇನ್‌ಫೋಸಿಸ್ ಕಂಪನಿಯ ಸಂಸ್ಥಾಪಕರು)

ಪಾಶ್ಚಿಮಾತ್ಯರಿಂದ ನಾವು ಏನನ್ನು ಕಲಿಯಬಹುದು ಎಂಬುದು ಚರ್ಚೆಯ ವಸ್ತು ತಾನೆ? ಇಲ್ಲಿ ನಾನು ಚರ್ಚಿಸುವುದೆಲ್ಲ ಭಾರತೀಯ ಮೌಲ್ಯಗಳೇ ಹೊರತು ಪಾಶ್ಚಿಮಾತ್ಯ ಮೌಲ್ಯಗಳಲ್ಲ ಎಂದು ಅನೇಕರು ಭಾವಿಸಬಹುದು. ಆದರೆ ನಾನು ವರ್ತಮಾನದಲ್ಲಿ ಬದುಕುತ್ತಿದ್ದೇನೆಯೆ ಹೊರತು ಗತಿಸಿಹೋದ ಕಾಲದಲ್ಲಲ್ಲ. ಈ ಮೌಲ್ಯಗಳು ಭಾರತದ್ದೇ ಆಗಿರಬಹುದು. ಆದರೆ ನಮ್ಮ ದೇಶದಲ್ಲಿ ಅವನ್ನು ಪಾಲಿಸುತ್ತಿಲ್ಲ. ಅವರು ಪಾಶ್ಚಿಮಾತ್ಯರು. ಈ ಮೌಲ್ಯಗಳು ಅವರದ್ದಾಗಿರಲಿ ಅಥವಾ ನಮ್ಮದೇ ಆಗಿರಲಿ, ಅದು ನನಗೆ ಮುಖ್ಯ ಅಲ್ಲ. ಅವನ್ನು ಯಾರು ಪಾಲಿಸುತ್ತಿದ್ದಾರೆ ಎಂಬುದಷ್ಟೇ ಮುಖ್ಯ.

ಭಾರತದ ಸಮಾಜ ವ್ಯವಸ್ಥೆಯಲ್ಲಿ ಆಳವಾಗಿ ಬೇರೂರಿರುವ ಕೌಟುಂಬಿಕ ಮೌಲ್ಯಗಳಲ್ಲಿ ನನಗೆ ಅಪಾರ ಹೆಮ್ಮೆಯಿದೆ. ನಾವು ನಮ್ಮ ಕುಟುಂಬಗಳಿಗೆ ಅತೀವ ನಿಷ್ಠರಾಗಿದ್ದೇವೆ. ಉದಾಹರಣೆಗೆ ಪಾಲಕರು ತಮ್ಮ ಮಕ್ಕಳಿಗಾಗಿ ಅಪಾರ ತ್ಯಾಗ ಮಾಡುತ್ತಾರೆ. ಮಕ್ಕಳು ತಮ್ಮ ಕಾಲ ಮೇಲೆ ನಿಲ್ಲುವ ತನಕ ಅವರಿಗೆ ಸಹಾಯ ಮಾಡುತ್ತಾರೆ. ಇದಕ್ಕೆ ಪೂರಕವಾಗಿ ಮುಪ್ಪಿನಲ್ಲಿ ತಮ್ಮ ತಂದೆ-ತಾಯಿಯರ ಆರೈಕೆ, ನಿರ್ವಹಣೆ ತಮ್ಮ ಕರ್ತವ್ಯ ಎಂದು ಮಕ್ಕಳು ಪರಿಗಣಿಸುತ್ತಾರೆ. 'ಮಾತೃದೇವೋಭವ', 'ಪಿತೃದೇವೋಭವ' ಎಂಬುದು ನಮ್ಮ ಉದಾತ್ತ ನಂಬಿಕೆ. ಅಣ್ಣ-ತಂಗಿಯರು ಪರಸ್ಪರರ ಸಲುವಾಗಿ ಎಂಥ ತ್ಯಾಗಕ್ಕೂ ಮುಂದಾಗುತ್ತಾರೆ. ಮದುವೆ ಅಂದರೆ ನಮಗೆ ಅನೂಹ್ಯ ಹಾಗೂ ಪವಿತ್ರ ಸಂಬಂಧ. ಅವಿಭಕ್ತ ಕುಟುಂಬ ನಮ್ಮಿಂದ ಇನ್ನೂ ಕಣ್ಮರೆಯಾಗಿಲ್ಲ. ಅಲ್ಲಿ ಪ್ರತಿಯೊಬ್ಬ ಸದಸ್ಯನೂ ಕುಟುಂಬದ ಏಳಿಗೆಗಾಗಿ ಶ್ರಮಿಸುತ್ತಾನೆ. ಜೀವನದಲ್ಲಿ ಸಂತಸದಿಂದ ಇರಲು ನಮಗೆ ಸಾಕಷ್ಟು ಕಾರಣಗಳಿವೆ.

ಇವು ಭಾರತೀಯ ಮೌಲ್ಯಗಳ ಹೂರಣ. ನಾವು ಒಂದು ಕುಟುಂಬವಾಗಿ ಹೀಗೆ ಸುಖ, ಆನಂದದಿಂದಿರಲು ಇವೇ ಮುಖ್ಯ ಕಾರಣ. ಇವೆಲ್ಲ ನಮ್ಮ ಶಕ್ತಿ. ನಮ್ಮ ಗೆಲುವಿನ ಹಿಂದೆ ಇಡೀ ಕುಟುಂಬದ ಪರಿಶ್ರಮ, ಹೋರಾಟವಿರುತ್ತದೆ. ಇನ್ಫೋಸಿಸ್‌ನ ಯಶಸ್ಸಿನ ಹಿಂದೆ ಅದರ ಸಂಸ್ಥಾಪಕರ ಕುಟುಂಬಗಳ ಅಪರಿಮಿತ ಬೆಂಬಲವಿದೆ. ಆದರೆ ಅತ್ಯಂತ ದುಃಖದ ಸಂಗತಿಯೇನೆಂದರೆ, ಕುಟುಂಬದ ವಿಷಯದಲ್ಲಿ ನಾವು ತಾಳುವ ಆಸಕ್ತಿ, ಕಾಳಜಿಯಿದೆಯಲ್ಲ ಅದು ಸಮಾಜದ ವಿಷಯ ಬಂದಾಗ ಮರೆಯಾಗಿರುತ್ತದೆ.

ಅಮೆರಿಕ, ಕೆನಡಾ, ಯುರೋಪ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ನಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತಾನು ಸಮಾಜಕ್ಕೆ ಉತ್ತರದಾಯಿ ಎಂದು ಭಾವಿಸಿರುತ್ತಾನೆ. ಹೀಗಾಗಿ ಅವರು ಜವಾಬ್ದಾರಿಯಿಂದ ವರ್ತಿಸುತ್ತಾರೆ. ಆದರೆ ನಮ್ಮಲ್ಲಿ ಸಮಾಜಕ್ಕೆ ಈ ಉತ್ತರದಾಯಿತ್ವ ಹಾಗೂ ಜವಾಬ್ದಾರಿಯೇ ಮಾಯ!

ನಮಗೂ ಅವರಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ ಸಮಾಜದ ಬಗ್ಗೆ ಅವರಿಗಿರುವ ಕಾಳಜಿ. ಸಮಾಜದ ಬಗ್ಗೆ ಅವರು ನಮಗಿಂತ ಜಾಸ್ತಿ ತ್ಯಾಗ ಮಾಡುತ್ತಾರೆ. ಜೀವನದ ಗುಣಮಟ್ಟ ಜಾಸ್ತಿಯಾಗಲು ಇದೇ ಮುಖ್ಯ ಕಾರಣ. ನಾವು ಪಾಶ್ಚಿಮಾತ್ಯರಿಂದ ಕಲಿಯಬೇಕಾದದ್ದು ಇದನ್ನೇ. ಇಷ್ಟೇ ಅಲ್ಲ, ನಾವು ಅವರಿಂದ ಮತ್ತೇನನ್ನು ಕಲಿಯಬಹುದು?

ಪಾಶ್ಚಿಮಾತ್ಯರಲ್ಲಿ ಎದ್ದು ಕಾಣುವ ಗುಣವೆಂದರೆ ಸಾರ್ವಜನಿಕ ಒಳತಿಗಾಗಿ ಅವರು ತೋರುವ ಕಾಳಜಿ. ಉದಾಹರಣೆಗೆ ಸಾರ್ವಜನಿಕ ಉದ್ಯಾನವನ, ರಸ್ತೆ, ಮೂತ್ರಾಲಯ, ಶೌಚಾಲಯಗಳನ್ನು ಅವರು ತಮ್ಮ ಸ್ವಂತದ್ದೇನೋ ಎಂಬಷ್ಟು ಸ್ವಚ್ಛವಾಗಿಟ್ಟುಕೊಳ್ಳುತ್ತಾರೆ. ಆ ದೇಶಗಳಲ್ಲಿ ಒಂದೇ ಒಂದು ಕಸಕಡ್ಡಿ, ಪೋಸ್ಟರ್‌ಗಳನ್ನು ಕಾಣಲು ಸಾಧ್ಯವಾಗುವುದಿಲ್ಲ. ಅವರ ಬೀದಿಗಳಂತೂ ಕನ್ನಡಿಯಷ್ಟು ಹೊಳಪು. ಅದೇ ನಾವು ಹೇಗಿದ್ದೇವೆ? ನಮ್ಮೆಲ್ಲರ ಮನೆಗಳೆಲ್ಲ ಸ್ವಚ್ಛ, ಆದರೆ ಬೀದಿಗಳೆಲ್ಲ ಕೊಳಕು, ಹೊಲಸುನಾತ, ಮನೆಯ ಮುಂದಿನ ಅಂಗಳಕ್ಕೆ ನೀರೆರೆಯುತ್ತೇವೆ. ಸಾರ್ವಜನಿಕ ಉದ್ಯಾನವನದ ರಕ್ಷಣೆ ನಮ್ಮ ಕೆಲಸವಲ್ಲ ಎಂದು ತೆಪ್ಪಗಿರುತ್ತೇವೆ. ರಸ್ತೆಯಲ್ಲಿ ಕಸ ಬಿಸಾಕುವಾಗ ನಮಗೇನೂ ಅನಿಸುವುದಿಲ್ಲ. ಅದು ನಮ್ಮ ಜನ್ಮಸಿದ್ಧ ಹಕ್ಕು ಎಂಬಂತೆ ವರ್ತಿಸುತ್ತೇವೆ.

ಭ್ರಷ್ಟಾಚಾರ ನಮ್ಮ ದೇಶಕ್ಕೆ ಅಂಟಿರುವ ದೊಡ್ಡ ಶಾಪ. ಪಶ್ಚಿಮದ ದೇಶಗಳು ಭ್ರಷ್ಟಾಚಾರದಿಂದ ಮುಕ್ತ. ಸಂಚಾರ ನಿಯಮ ಉಲ್ಲಂಘಿಸಿದಾಗ ಪೋಲೀಸರು ದಂಡ ಪೀಕದೇ ಬಿಡುವುದಿಲ್ಲ. ಆ ಪೋಲೀಸರಿಗೆ ಲಂಚ ಕೊಟ್ಟು ಬಚಾವ್ ಆಗಲು ಸಾಧ್ಯವೇ ಇಲ್ಲ. ನಮ್ಮಲ್ಲಿ ಮರ್ಡರ್ ಮಾಡಿದವರೂ ಲಂಚ ಕೊಟ್ಟು ಪಾರಾಗುತ್ತಾರೆ. ತೆರಿಗೆ ಕಟ್ಟದೇ ಇರುವುದು, ವಂಚನೆ, ಕಳ್ಳವ್ಯಾಪಾರ, ನಕಲಿದಂಧೆ ನಮ್ಮಲ್ಲಿ ಸಾಮಾನ್ಯ. ಕಂಟ್ರಾಕ್ಟರ್‌ಗಳು ಅಧಿಕಾರಿಗಳಿಗೆ ಲಂಚ ತಿನ್ನಿಸುವುದು, ಅವರು ಕಳಪೆ ಗುಣಮಟ್ಟದ ರಸ್ತೆ, ಸೇತುವೆ ನಿರ್ಮಿಸುವುದು, ಆ ರಸ್ತೆ ಕಿತ್ತುಹೋಗುವುದು, ಸೇತುವೆ ಕುಸಿದು ಬೀಳುವುದು ನಮ್ಮ ದೇಶದಲ್ಲಿ ನಿತ್ಯವೂ ನಡೆಯುತ್ತಿದ್ದರೆ ಯಾರಿಗೂ ಏನೂ ಅನ್ನಿಸುವುದಿಲ್ಲ. ಕಂಟ್ರಾಕ್ಟರ್‌ನನ್ನು ಒಬ್ಬರೂ ಪ್ರಶ್ನಿಸುವುದಿಲ್ಲ. ಇಡೀ ಸಮಾಜವೇ ರೋಗಗ್ರಸ್ತವಾದಂತೆ ಇದ್ದರೂ ಯಾರೂ ದನಿಯೆತ್ತುವುದಿಲ್ಲ.

ನಮ್ಮ ಸುತ್ತ ಹಲವು ಸಮಸ್ಯೆಗಳಿದ್ದರೂ ಪರಿಹಾರಕ್ಕೆ ಯಾರೂ ಮುಂದಾಗುವುದಿಲ್ಲ. ಸಮಸ್ಯೆಗಳೇ ಇಲ್ಲವೇನೋ ಎಂಬಂತೆ ನಿರ್ಲಿಪ್ತವಾಗಿ ಸುಮ್ಮನಿದ್ದುಬಿಡುತ್ತೇವೆ. ಭಾರತ ವಿಪರೀತ ಬರಗಾಲ ಎದುರಿಸಲಿದೆ ಎಂದು ಸುಮಾರು ನಲವತ್ತೆರಡು ವರ್ಷಗಳ ಹಿಂದೆ ಖ್ಯಾತ ಜಲತಜ್ಞ ಡಾ.ಕೆ.ಎಲ್.ರಾವ್ ಎಚ್ಚರಿಸಿದ್ದರಲ್ಲದೇ ದಕ್ಷಿಣ ಹಾಗೂ ಉತ್ತರ ಭಾರತದ ನದಿಗಳನ್ನು ಸೇರಿಸಿ ವಾಟರ್‌ಗ್ರೀಡ್ ರಚಿಸಬೇಕೆಂದು ಸಲಹೆಯನ್ನೂ ಮಾಡಿದ್ದರು. ಆದರೆ ಯಾರೂ ಅವರ ಮಾತುಗಳನ್ನು ಕೇಳಿಸಿಕೊಳ್ಳಲಿಲ್ಲ.

೧೯೮೩ರಲ್ಲೀಯೇ ಬೆಂಗಳೂರಿಗೆ ಬೇಕಾಗುವಷ್ಟು ವಿದ್ಯುತ್ತನ್ನು ಶಾಖೋತ್ಪನ್ನ ವಿದ್ಯುತ್‌ಸ್ಥಾವರಗಳ ಮೂಲಕ ಉತ್ಪಾದಿಸದಿದ್ದರೆ ವಿದ್ಯುತ್‌ಕ್ಷಾಮ ತಲೆದೋರಬಹುದು ಎಂದು ಯೋಚಿಸಲಾಗಿತ್ತು. ಇಪ್ಪತ್ತೈದು ವರ್ಷಗಳ ನಂತರವೂ ಈ ವಿಷಯದಲ್ಲಿ ಯಾವ ಸರಕಾರವೂ ಕ್ರಮ ಕೈಗೊಳ್ಳಲಿಲ್ಲ.

ನಾನು ಪದೇಪದೇ ವಿದೇಶ ಪ್ರವಾಸ ಮಾಡುತ್ತಿರುತ್ತೇನೆ. ಐದು ವರ್ಷಗಳ ಹಿಂದೆ ವಿದೇಶಾಂಗ ಸಚಿವಾಲಯಕ್ಕೆ ಒಂದು ಮನವಿ ಮಾಡಿದ್ದೆ. ಅದೇನೆಂದರೆ ಪಾಸ್‌ಪೋರ್ಟ್ ಬುಕ್‌ನಲ್ಲಿ ಹಾಳೆಗಳ ಸಂಖ್ಯೆಯನ್ನು ೨೪೦ಕ್ಕೆ ಏರಿಸಿ ಎಂದು. ಪದೇಪದೆ ಪಾಸ್‌ಪೋರ್ಟ್ ಕಚೇರಿಗೆ ಅಲೆಯುವುದನ್ನು ತಪ್ಪಿಸುವುದೇ ಇದರ ಉದ್ದೇಶ. ಇಷ್ಟು ಸಣ್ಣ ಸಂಗತಿಗಳ ಬಗ್ಗೆ ಸಹ ಯಾರೂ ಯೋಚಿಸುವುದಿಲ್ಲ. ಸಲಹೆ ನೀಡಿದರೂ ಯಾರೂ ಕ್ರಮ ಕೈಗೊಳ್ಳುವುದಿಲ್ಲ. ತಮಗೇ ಎಲ್ಲ ಗೊತ್ತು, ಬೇರೆಯವರ ಸಲಹೆ ಕೇಳುವುದು ತಮ್ಮ ಘನತೆಗೆ ತಕ್ಕುದಾದುದಲ್ಲ ಎಂದೇ ಎಲ್ಲರೂ ಭಾವಿಸುತ್ತಾರೆ.

ಪಾಶ್ಚಿಮಾತ್ಯರಿಂದ ನಾವು ಕಲಿಯಬಹುದಾದ ಪ್ರಮುಖ ಗುಣವೆಂದರೆ ಉತ್ತರದಾಯಿತ್ವ. ನೀವು ಯಾರೇ ಆಗಿರಿ, ನೀವು ಮಾಡುವ ಕೆಲಸಕ್ಕೆ ಉತ್ತರದಾಯಿಗಳು. ನಿಮ್ಮಿಂದ ಸಣ್ಣ ಲೋಪವಾದರೂ ನೀವು ಜವಾಬುದಾರರು. ಆದರೆ ನಮ್ಮ ದೇಶದಲ್ಲಿ ಇದಿಲ್ಲವೇ ಇಲ್ಲ. ನೀವು ದೊಡ್ಡ ದೊಡ್ಡ ಸ್ಥಾನಕ್ಕೆ ಹೋದಂತೆಲ್ಲ ಕಡಿಮೆ ಕಡಿಮೆ ಬಾಧ್ಯಸ್ಥರಾಗುತ್ತಾ ಹೋಗುತ್ತೀರಿ. ಕೆಲ ವರ್ಷಗಳ ಹಿಂದೆ ಹಿರಿಯ ರಾಜಕಾರಣಿಯೊಬ್ಬರು ಹೇಳಿದ್ದರು– 'ಕಳೆದ ಹತ್ತು ವರ್ಷಗಳಿಂದ ತೆರಿಗೆ ಪಾವತಿ ಮಾಡಲು ಮರೆತಿದ್ದೇನೆ'. ದುರಂತವೇನೆಂದರೆ ಅವರನ್ನು ಯಾರೂ ಪ್ರಶ್ನಿಸಲಿಲ್ಲ. ವಿದೇಶಗಳಲ್ಲಾಗಿದ್ದರೆ ಅವರಿಗೆ ಕನಿಷ್ಠ ಹತ್ತು ವರ್ಷವಾದರೂ ಜೈಲುಶಿಕ್ಷೆಯಾಗುತ್ತಿತ್ತು.

ಭಾರತದಲ್ಲಿ ಕನಿಷ್ಠ ನೂರಕ್ಕೂ ಹೆಚ್ಚು ನಷ್ಟದಲ್ಲಿರುವ ಸಾರ್ವಜನಿಕ ರಂಗದ ಉದ್ದಿಮೆಗಳಿವೆ. ಈ ಉದ್ದಿಮೆಗಳು ನಷ್ಟ ಅನುಭವಿಸುವಂತಾಗಿದ್ದು ಹೇಗೆ ಎಂಬ ಬಗ್ಗೆ ಯಾರೂ ತಲೆಕೆಡಿಸಿಕೊಂಡಿಲ್ಲ. ಒಬ್ಬನೇ ಒಬ್ಬನಿಗೂ ಶಿಕ್ಷೆಯಾಗಿಲ್ಲ. ಮಾಡಬಾರದ ಕೆಲಸ ಮಾಡಿ ಶಿಕ್ಷೆಯಿಲ್ಲದೇ, ಪ್ರಾಯಶ್ಚಿತವಿಲ್ಲದೇ ಪಾರಾಗಬಹುದಾದರೆ ಅದು ಭಾರತದಲ್ಲಿ ಮಾತ್ರ ಸಾಧ್ಯ. ಸಾರ್ವಜನಿಕರಂಗ ಉದ್ದಿಮೆಗಳಲ್ಲಿ ಸಾವಿರಾರು ಕೋಟಿ ರೂ ನಷ್ಟವಾದವು. ಎಲ್ಲರೂ ನಿಶ್ಚಿಂತೆಯಿಂದ ಇದ್ದಾರೆ. ಪಾಶ್ಚಿಮಾತ್ಯ ದೇಶಗಳಲ್ಲಿ ಇಂಥವನ್ನು ನಿರೀಕ್ಷಿಸಲೂ ಸಾಧ್ಯವಿಲ್ಲ.

ಪಾಶ್ಚಿಮಾತ್ಯ ಮೌಲ್ಯವ್ಯವಸ್ಥೆಯಲ್ಲಿ ಶ್ರಮಗೌರವಕ್ಕೆ ಅಪಾರ ಮಹತ್ವ. ಅಲ್ಲಿ ಪ್ರತಿಯೊಬ್ಬನ ಕೆಲಸವೂ ಮುಖ್ಯವೇ. ಒಬ್ಬ ಚಾಲಕ, ಮಾಲಿ, ಕೂಲಿಯ ಕೆಲಸವನ್ನು ಪ್ರಮುಖವೆಂದೇ ಪರಿಗಣಿಸಲಾಗುತ್ತದೆ. ಆದರೆ ನಮ್ಮಲ್ಲಿ ಡಾಕ್ಟರು, ಎಂಜಿನಿಯರು, ಪ್ರೊಫೆಸರ್‌ಗಳು, ಸಿನಿಮಾನಟರು, ಕ್ರಿಕೆಟ್ ತಾರೆಯರು, ಉದ್ದಿಮೆದಾರರ ಕೆಲಸ ಮಾತ್ರ ಮುಖ್ಯ. ಉಳಿದವರ ಕೆಲಸಗಳಿಗೆ ಕಿಮ್ಮತ್ತಿಲ್ಲ. ಹೀಗಾಗಿ ಶ್ರಮಗೌರವಕ್ಕೆ ಬೆಲೆ ಇಲ್ಲದಂತಾಗಿದೆ.

ಭಾರತೀಯರು ಫ್ರೆಂಡ್ಲಿ ಇಲ್ಲದಿದ್ದರೂ ಇನ್‌ಟಿಮೇಟ್ ಆಗುತ್ತಾರೆ. ಸ್ವಲ್ಪವೂ ಹಿಂಜರಿಯದೇ ಅಪರಿಚಿತರ ಬಳಿಯೂ ಸಹಾಯ ಅಪೇಕ್ಷಿಸುತ್ತಾರೆ. ಒಮ್ಮೆ ನಾನು ಬೆಂಗಳೂರಿನಿಂದ ಮಂತ್ರಾಲಯಕ್ಕೆ ಹೋಗುತ್ತಿದ್ದೆ. ರೈಲಿನಲ್ಲಿ ನನ್ನ ಪಕ್ಕದಲ್ಲಿದ್ದ

ಸಹಪ್ರಯಾಣಿಕರು ಪರಿಚಯ ಮಾಡಿಕೊಂಡರು. ಇನ್ನೂ ಐದು ನಿಮಿಷಗಳಾಗಿರಲಿಲ್ಲ. ತಮ್ಮ ಕಂಪನಿಯ ಎಂಡಿ ಅವರಿಗೆ ಮಾತಾಡಿ ತಮ್ಮನ್ನು ಕೆಲಸದಿಂದ ತೆಗೆದುಹಾಕದಂತೆ ಶಿಫಾರಸು ಮಾಡಬೇಕೆಂದು ವಿನಂತಿಸಿಕೊಂಡರು. ನಮ್ಮ ಜನರಿಗೆ ಇಂಥ ಮನವಿ ಮಾಡಿಕೊಳ್ಳಲು ಸ್ವಲ್ಪವೂ ನಾಚಿಕೆಯೆನಿಸುವುದಿಲ್ಲ. ನಮ್ಮಲ್ಲಿ ಕೆಲಸಕ್ಕೆ ಶಿಫಾರಸು ಮಾಡುವುದು, ಪ್ರಭಾವ ಬೀರುವುದಂತೂ ತೀರಾತೀರಾ ಸಾಮಾನ್ಯ. ನಮಗೆ ಪರಿಚಿತರಾದ ಯಾರ್‍ಯಾರಿಂದಲೋ ಫೋನ್ ಮಾಡಿಸಿ ವಶೀಲಿ ಬೀರುತ್ತಾರೆ. ತಾವು ಮಾಡುವ ಹೇಯ ಕೃತ್ಯಕ್ಕೆ ಅವರಿಗೆ ಸ್ವಲ್ಪವೂ ಮುಜುಗರವೆನಿಸುವುದಿಲ್ಲ. ಶಾಲಾ ಸೀಟು, ಕಾಲೇಜು ಶಿಕ್ಷಕರ ಹುದ್ದೆ, ಸರಕಾರಿ ಕೆಲಸ, ರೇಶನ್ ಕಾರ್ಡ್, ರೈಲ್ವೆ ರಿಸರ್ವೇಶನ್.... ಹೀಗೆ ಪ್ರತಿಯೊಂದಕ್ಕೂ ಇನ್‌ಫ್ಲೂಯೆನ್ಸ್ ಮಾಡುವ, ಪ್ರಭಾವಿಗಳ ಇನ್‌ಫ್ಲೂಯೆನ್ಸ್‌ನಿಂದಲೇ ಕೆಲಸ ಮಾಡಿಸಿಕೊಳ್ಳುವ ಒಂದು ಮನಸ್ಥಿತಿ ಸಮಾಜದಲ್ಲಿ ಗಟ್ಟಿಯಾಗಿ ಬೇರೂರುತ್ತಿದೆ. ಇದೂ ಸಹ ಒಂದು ರೀತಿಯ ಭ್ರಷ್ಟಾಚಾರವೇ.

ಜಗತ್ತಿನಲ್ಲಿ ದಪ್ಪಚರ್ಮದವರು ಹೆಚ್ಚಿರುವ ದೇಶ ಅಂದ್ರೆ ಭಾರತ ಎಂಬುದು ನನಗಂತೂ ಮನವರಿಕೆಯಾಗಿದೆ. ಸಾರ್ವಜನಿಕವಾಗಿ, ನೇರಾನೇರಾ ಜನ ಸುಳ್ಳು ಹೇಳುತ್ತಾರೆ. ಅವರು ಹೇಳುತ್ತಿರುವುದು ಸುಳ್ಳು ಎಂಬುದು ಗೊತ್ತಿರುತ್ತದೆ. ಹೇಳುವವರಿಗಾಗಲೀ, ಕೇಳುವವರಿಗಾಗಲೀ ಏನೂ ಅನಿಸುವುದಿಲ್ಲ. ವೃತ್ತಿಪರತೆಯೆಂಬುದು ನಮ್ಮೊಳಗೆ ಇನ್ನೂ ಇಳಿದಿಲ್ಲ. ಬೇಕಾಬಿಟ್ಟಿ ಕಳಪೆದರ್ಜೆ ಕೆಲಸ ಎಲ್ಲೆಡೆ ಗೋಚರಿಸುತ್ತವೆ.

ಇಂಡಿಯನ್ ಸ್ಟ್ಯಾಂಡರ್ಡ್ ಟೈಮ್ ಎಂಬುದು ದೊಡ್ಡ ರಾಷ್ಟ್ರೀಯ ಜೋಕು. ಸಮಯಪಾಲನೆಯೆಂಬುದು ನಮಗಿನ್ನೂ ಸಂಸ್ಕಾರ, ಸಂಸ್ಕೃತಿ ಎಂದು ಅನಿಸಿಯೇ ಇಲ್ಲ. ಅದು ವಾಸಿಯಾಗದ ರೋಗ. ಯಾರೂ ಸಹ ಸಮಯವನ್ನು ಪಾಲಿಸುವುದಿಲ್ಲ. ಯಾರೂ ಡೆಡ್‌ಲೈನನ್ನು ಗೌರವಿಸುವುದಿಲ್ಲ. ಈ ದೇಶದಲ್ಲಿ ಯಾವ ಯೋಜನೆಯೂ ನಿಗದಿತ ಸಮಯದೊಳಗೆ ಮುಗಿದಿಲ್ಲ. ಇದನ್ನು ನಾವು ಮುಕ್ತವಾಗಿ ಒಪ್ಪಿಕೊಂಡುಬಿಟ್ಟಿದ್ದೇವೆ. ಸಾರ್ವಜನಿಕ ಕಾರ್ಯಕ್ರಮಗಳಾವವೂ ಸಮಯಕ್ಕೆ ಸರಿಯಾಗಿ ಆರಂಭವಾಗುವುದಿಲ್ಲ. ಮಾಡಲೂ ಏನೂ ಕೆಲಸ ಇಲ್ಲದವರು ಸಮಯಪಾಲನೆ ಮಾಡುತ್ತಾರೆಂದು ನಮ್ಮ ನಂಬಿಕೆ ಹಾಗೂ ಆಚರಣೆಯಾಗಿದೆ. ಹೀಗಾಗಿ ಗಂಟೆಗಟ್ಟಲೆ ತಡವಾಗಿ ಆಗಮಿಸುವುದು ಪ್ರತಿಷ್ಠೆಯ ವಿಚಾರ. ಸಾವಿರಾರು ಜನರನ್ನು ತಾಸುಗಟ್ಟಲೆ ಕಾಯಿಸಿದರೆ ಯಾರಿಗೂ ಏನೂ ಅನಿಸುವುದಿಲ್ಲ. ಇದು ಭಾರತದಲ್ಲಿ ಮಾತ್ರ ಸ್ವೀಕಾರಾರ್ಹ. ಬೇರೆ ದೇಶಗಳಲ್ಲಿ ಶಿಕ್ಷಾರ್ಹ ಎಂಬಂಥ ಅಪರಾಧ.

ಪಾಶ್ಚಿಮಾತ್ಯ ದೇಶಗಳು ಮೆರಿಟೋಕ್ರೆಸಿಯನ್ನು ಗಾಢವಾಗಿ ಆಲಂಗಿಸಿಕೊಂಡಿವೆ. ಮೆರಿಟೋಕ್ರೆಸಿಯಲ್ಲಿ ತಪ್ಪು ಯಾರೇಮಾಡಲಿ ಅದು ತಪ್ಪೇ. ವ್ಯಕ್ತಿಯ ಸಾಧನೆಯ ಮೌಲ್ಯಮಾಪನಕ್ಕೆ ವೈಯಕ್ತಿಕ ಪೂರ್ವಗ್ರಹಗಳು ಪ್ರಭಾವ ಬೀರಕೂಡದು. ಆದರೆ ನಮ್ಮಲ್ಲಿ ವಿರುದ್ಧವಾದ ಸ್ಥಿತಿಯಿದೆ. ಇನ್‌ಫ್ಲೂಯೆನ್ಸ್ ಮಾಡಿಸಿದರೆ ಎಲ್ಲವೂ ಮಾಫ್!

ಸಾರ್ವಜನಿಕ ಜೀವನದಲ್ಲಿ ವಚನಬದ್ಧತೆಯ ಮಹತ್ವ ಪ್ರತಿಪಾದಿಸಿದ್ದು ಭಾರತ, ಆದರೆ ದುರ್ದೈವವೆಂದರೆ ಅದನ್ನು ಉಲ್ಲಂಘಿಸಿದ್ದೂ ಭಾರತವೇ. ಸಾರ್ವಜನಿಕ ಬದುಕಿನಲ್ಲಿ ಪ್ರಾಮಿಸ್‌ಗೆ ಬೆಲೆಯೇ ಇಲ್ಲ. ಭರವಸೆ, ಆಶ್ವಾಸನೆಗಳೆಲ್ಲ ಸುಳ್ಳಿಗೆ ಪರ್ಯಾಯ

ಪದಗಳಾಗಿ ಮಾರ್ಪಟ್ಟಿವೆ. ಇನ್ನೂ ಆಘಾತಕಾರಕ ಸಂಗತಿಯೆಂದರೆ ಸುಶ್ಷಿತರೇ ಸಾರ್ವಜನಿಕ ಬದುಕಿನಲ್ಲಿ ಸುಳ್ಳು ಹೇಳುತ್ತಿರುವವರು. ಇದನ್ನು ರಾಷ್ಟ್ರೀಯ ಮನಸ್ಥಿತಿ ಎಂದು ಕರೆದಿದ್ದು ಅದಕ್ಕಾಗಿಯೇ. ಅಮೇರಿಕ ವಿಶ್ವವಿದ್ಯಾಲಯಗಳಲ್ಲಿ ಕಲಿಯಲು ಹೋದ ವಿದ್ಯಾರ್ಥಿಗಳ ಪೈಕಿ ಶೈಕ್ಷಣಿಕ ಸಾಲ ಪಡೆದು ತೀರಿಸದಿದ್ದವರಲ್ಲಿ ಹೆಚ್ಚಿನವರು ಭಾರತೀಯರೇ. ಕೋರ್ಸ್ ಮುಗಿಯುತ್ತಿದ್ದಂತೆ ಹೇಳದೇ ಕೇಳದೆ ಓಡಿಹೋಗುತ್ತಾರೆ. ಇದರಿಂದ ಅರ್ಹ ಭಾರತೀಯ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯಗಳು ಸಾಲ ಕೊಡಲು ಹಿಂದೇಟು ಹಾಕುತ್ತವೆ. ಹೀಗೆಂದು ಒಮ್ಮೆ ನನಗೆ ಅಮೇರಿಕಾದ ಪ್ರತಿಷ್ಠಿತ ವಿಶ್ವವಿದ್ಯಾಲಯದ ಪ್ರೊಫೆಸರ್ ಹೇಳಿದ್ದರು.

ನನಗೆ ಅನೇಕ ಸಲ ಅನಿಸಿದ್ದುಂಟು, ಭಾರತೀಯರಾದ ನಾವು ಬೌದ್ಧಿಕ ಪ್ರಾಮಾಣಿಕತೆ ವಿಷಯದಲ್ಲಿ ಸೋಗಲಾಡಿತನ ಪ್ರದರ್ಶಿಸುತ್ತೇವೆಂದು. ಉದಾಹರಣೆಗೆ, ರಾಜಕೀಯ ನಾಯಕರು ಪತ್ರಕರ್ತರೊಂದಿಗೆ ಮೊಬೈಲ್ ಫೋನಿನಲ್ಲಿ ಹರಟೆ ಹೊಡೆಯುತ್ತಾ ತಮಗೆ ಟೆಕ್ನಾಲಜಿಯಲ್ಲಿ ನಂಬಿಕೆಯಿಲ್ಲವೆಂದು ಹೇಳುವುದು! ಮತ್ತೊಂದೆಡೆ ಭಾರತ ತಂತ್ರಜ್ಞಾನದಲ್ಲಿ ಆಗಾಧ ಪ್ರಗತಿಯನ್ನೂ ಸಾಧಿಸಿದೆ, ಅದು ಸಾಧ್ಯವಾಗಿದ್ದು ನಮ್ಮ ಸರಕಾರದ ಆಡಳಿತವಿದ್ದಾಗ ಅನ್ನುತ್ತಾರೆ. ಇಂಥ ಆಷಾಢಭೂತಿತನ ಏಕೆ? ಈ ರೀತಿಯ ದ್ವಂದ್ವ ಪ್ರತಿ ಕ್ಷೇತ್ರದಲ್ಲಿ ಕಾಣಬಹುದು. ಇದು ನಿಲ್ಲುವಂತಾಗಬೇಕು.

ಒಬ್ಬ ನಾಗರಿಕರಾಗಿ ನಮಗೆ ನಮ್ಮೆಲ್ಲರ ಹಕ್ಕುಗಳೇನಂಬುದು ಗೊತ್ತಿದೆ. ಆದರೆ ಪ್ರತಿ ಹಕ್ಕಿನೊಂದಿಗೆ ಪಾಲಿಸಬೇಕಾದ ಕರ್ತವ್ಯಗಳೇನೆಂಬುದನ್ನು ನಾವು ಬುದ್ಧ್ಯ ಪೂರ್ವಕವಾಗಿ ಮರೆಯುತ್ತೇವೆ ಅಥವಾ ಪಾಲಿಸುವುದಿಲ್ಲ. ನಾವು ನಮ್ಮ ಕುಟುಂಬಕ್ಕೆ ಎಷ್ಟು ಬಾಧ್ಯಸ್ಥರೋ, ಅಷ್ಟೇ ಸಮಾಜಕ್ಕೂ ಬಾಧ್ಯಸ್ಥರು, ಉತ್ತರದಾಯಿಗಳು ಎಂಬ ಸೀರಿಯಸ್ನೆಸ್ ಎಲ್ಲಿಯವರೆಗೆ ನಮಗೆ ಮೂಡುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಸಮಾಜದೆಡೆಗಿನ ನಮ್ಮ ನಡೆಗಳು ಹೀಗೆಯೇ ಇರುತ್ತವೆ. ಅಲ್ಲಿಯತನಕ ನಾವು ನಮ್ಮ ಬೀದಿ, ರಸ್ತೆ, ಉದ್ಯಾನವನಗಳನ್ನೆಲ್ಲ ಇಷ್ಟೆ ಹೊಲಸಾಗಿ ಇಟ್ಟುಕ್ಕೊಳ್ಳುತ್ತೇವೆ.

ಈ ನಿಟ್ಟಿನಲ್ಲಿ ಭಾರತೀಯ ಮೂಲದ ಆದರೆ ಆಚರಣೆಯಲ್ಲಿ ಪಾಶ್ಚಿಮಾತ್ಯವೆನಿಸಿರುವ ಮೌಲ್ಯಗಳನ್ನು ನಾವು ಈಗ ನಮ್ಮದಾಗಿಸಿಕೊಳ್ಳಬೇಕಿದೆ. ವಿನ್‌ಸ್ಟನ್ ಚರ್ಚಿಲ್ ಹೇಳುತ್ತಾನೆ. 'ಮಹಾನತೆಗೆ ನಾವು ಕೊಡುವ ಬೆಲೆಯೇ ಜವಾಬ್ದಾರಿ. ನಮ್ಮ ಕುಟುಂಬದ ಮೌಲ್ಯಗಳನ್ನು ಮನೆಯ ಅಂಗಳದಾಚೆಗೂ ವಿಸ್ತರಿಸುವ ಅಗತ್ಯ ಇಂದು ಅವಶ್ಯವಾಗಿದೆ'.

(ಎನ್.ಆರ್.ನಾರಾಯಣ ಮೂರ್ತಿಯವರ 'ಎ ಬೆಟರ್ ಇಂಡಿಯಾ ಎ ಬೆಟರ್ ವರ್ಲ್ಡ್' ಪುಸ್ತಕದಿಂದ ಆಯ್ದ ಭಾಗಗಳ ಭಾವಾನುವಾದ.
ಅನುವಾದಕರು : ಶ್ರೀ ವಿಶ್ವೇಶ್ವರ ಭಟ್ : ಸಾಭಾರ : ವಿಜಯಕರ್ನಾಟಕ)

* * *

ರಾಷ್ಟ್ರಶ್ರೀ ನಿವಾಸಕ್ಕೆ ದತ್ತ ಪ್ರಶ್ನೆಗಳು

– ಅರೈಯರ್ ಶ್ರೀರಾಮಶರ್ಮ

- ಲೋಕದ ಡೊಂಕು ತಿದ್ದಬೇಕೆ, ಬೇಡವೆ?
- ನಮ್ಮ ಮನವ ಸಂತೈಸಿಕೊಳ್ಳಬೇಕೆ, ಬೇಡವೆ?
- ವಿಚಾರವಂತರ ಮಾತಿಗೆ ಬೆಲೆ ಹೇಗೆ ನಿರ್ಧರಿಸುವುದು?
- ಲೇಖಕನ ವೈಯಕ್ತಿಕವಾದ ಗುಣದೋಷಗಳ ಪ್ರಭಾವ ಲೇಖನ ವಿಷಯದಲ್ಲಿ ಪ್ರಸ್ತುತವೆ, ಅಪ್ರಸ್ತುತವೆ?
- ಇತಿಹಾಸಕ್ಕೂ ಸಾಹಿತ್ಯ ಕಲೆಗಾರರಿಗೂ ಅಂತರವಿದೆಯೇ, ಇಲ್ಲವೇ?
- ರಾಷ್ಟ್ರೀಯತೆ ಎಂದರೆ ಏನು, ಎಂತು, ನಿರ್ಧಾರವಾಗಬೇಕೆ, ಬೇಡವೆ?
- ಮತವನ್ನು ರಕ್ಷಿಸಬೇಕೆ, ಮತಾಂತರವನ್ನು ರಕ್ಷಿಸಬೇಕೆ?
- ಸಮಾಜದಲ್ಲಿ ಕಾಣುವ ಉತ್ಕೃಷ್ಟ ನಿಕೃಷ್ಟಭಾವಗಳು ಸ್ವಾಭಾವಿಕವೇ, ಕೃತಕವೇ?
- ಧರ್ಮವು ಸಮಾಜಾಧಾರಿತವೋ, ಸಮಾಜವು ಧರ್ಮಾಧಾರಿತವೋ?
- ಧರ್ಮಗಳಿಗೂ ಸಮಾಜಕ್ಕೂ ನಂಟು ಉಂಟೆ, ಇಲ್ಲವೆ?
- ಧರ್ಮದಲ್ಲಿ ಭಾರತೀಯ ಅಭಾರತೀಯ ಎಂಬ ವಿಭಾಗ ಸರಿಯೇ, ತಪ್ಪೇ?
- ಒಂದು ರಾಷ್ಟ್ರದ ಸುಸ್ಥಿತಿಗೆ ಮತಾಂತರ ಸಾಧಕವೇ, ಬಾಧಕವೇ?
- ದೇವರು, ದಿಂಡರು ಗುರುಗಳು ಎಂಬ ವಿಷಯಗಳನ್ನು ಭಾರತೀಯರು ಇಟ್ಟುಕೊಳ್ಳಬೇಕೆ, ಬೇಡವೆ?
- ಒಂದು ರಾಷ್ಟ್ರವನ್ನೇ ಧರ್ಮಾಂತರ ಮಾಡಬೇಕೆ, ಬೇಡವೆ?
- ಪ್ರಾಚೀನ ಭಾರತೀಯ ಗ್ರಂಥಗಳಿಗೆ ಮಾನ್ಯತೆ ಕೊಡಬೇಕೆ, ಬೇಡವೆ?
- ಯಾವುದೇ ಧರ್ಮದ ಯಾವುದೇ ಮತದ ಯಾವುದೇ ರಾಷ್ಟ್ರದ ಯಾವುದೇ ಅಧಿಕಾರದ, ಯಾವುದೇ ಗುರುಪೀಠಗಳ ವ್ಯಕ್ತಿ ಮಾಡುವ ತಪ್ಪಿಗೆ ಸಮಾಜ ಕಳಂಕಿತವಾಗುವುದೇ, ಇಲ್ಲವೇ?
- ಸಾಮಾಜಿಕ ರಾಷ್ಟ್ರೀಯ ಸಮಸ್ಯೆಗಳನ್ನು ವೈಯಕ್ತಿಕವಾಗಿ ವಿಚಾರಮಾಡಿ ಬಿಡಿಸುವ ಪ್ರಯತ್ನ ಮಾಡಬೇಕೆ, ಬೇಡವೆ?
- ವೈಯಕ್ತಿಕ, ಸಾಮಾಜಿಕ, ಸಾಹಿತ್ಯಿಕ, ಬೌದ್ಧಿಕ ಆಧಾರಿತವಾದ ಡೊಂಕುಗಳನ್ನು ತಿದ್ದಿಕೊಳ್ಳಬೇಕೆ, ಬೇಡವೆ?
- ಭಾರತೀಯ ಇತಿಹಾಸವನ್ನೂ ಪ್ರಮಾಣ ಗ್ರಂಥಗಳನ್ನೂ ಭಾರತೀಯ ದೃಷ್ಟಿಯಿಂದ ತಿಳಿಯಬೇಕೆ, ಬೇಡವೆ?
- ಆರ್ಯದ್ರಾವಿಡವಾದವು ಪ್ರಚಲಿತವರಿದುದು ಭಾರತೀಯ ಮೂಲದಿಂದಲೋ, ವಿದೇಶಮೂಲದಿಂದಲೋ?
- ಕ್ರಿಶ್ಚಿಯನ್ ಇಸ್ಲಾಂ ಎಂಬ ಮತಾಂತರಗಳು ರಾಷ್ಟ್ರದ ಏಕತೆಗೆ ಅನುಕೂಲವೋ, ಪ್ರತಿಕೂಲವೋ?
- ರಾಷ್ಟ್ರದ ಏಕತೆಗೆ ರಾಜ್ಯಗಳ ಏಕತೆಗೆ ಭಂಗ ತರುವವಂತಹ ಯಾವುದೇ ಅಂಶಗಳನ್ನು ನಮ್ಮ ಆಡಳಿತವು ಉಪೇಕ್ಷಿಸಬೇಕೆ, ಬೇಡವೆ?

- ರಾಷ್ಟ್ರವ್ಯಾಪ್ತಿಯಲ್ಲದ ಸಣ್ಣ ಪುಟ್ಟ ಧಾರ್ಮಿಕ ವಿಚಾರಗಳನ್ನು ಆಡಳಿತವು ಹೇಗೆ ನಿಭಾಯಿಸಬೇಕು?
- ಇತರ ರಾಷ್ಟ್ರಗಳ ಧರ್ಮ ವ್ಯವಸ್ಥೆಗಳು ಅನುಕರಣೀಯವೇ, ಅಲ್ಲವೇ?
- ವಿದೇಶಿ ಆಕ್ರಮಣ ಸ್ವದೇಶಿ ವ್ಯವಸ್ಥೆಗಳಿಗೆ ಈಗಿನ ಪರಿಹಾರ ಮತ್ತು ಉಪಾಯಗಳೇನು?
- ಭಾರತ ರಾಷ್ಟ್ರದ ಬಗ್ಗೆ ಹೇಳುವ ಮಾತುಗಳು ಇತರ ರಾಷ್ಟ್ರಗಳಿಗೂ ಅನ್ವಯಿಸಬೇಕೆ, ಬೇಡವೆ?
- ಸಾಹಿತ್ಯವು ಇತಿಹಾಸವನ್ನು ನಿರೂಪಿಸುವಾಗ ಯಾವ ಮಾನದಂಡಗಳಿರಬೇಕು?
- ತಾತ್ವಿಕ ವಿಚಾರಗಳಿಗೂ "ಝೋಕ್" ಅಂತಹ, ಅಥವಾ ವೈಯಕ್ತಿಕ ಡೊಂಕುಗಳಿಗೂ, ಉತ್ಪ್ರೇಕ್ಷಿತ ಇತಿಹಾಸಗಳಿಗೂ ಸಾಹಿತ್ಯದಲ್ಲಿ ಸಮನ್ವಯ ಉಂಟೆ, ಇಲ್ಲವೆ?
- ಯಾವುದೇ ಧರ್ಮವು ತನಗೆ ಇಷ್ಟವಿಲ್ಲೆಂದ ಮಾತ್ರಕ್ಕೆ ಅದು ಅಧರ್ಮವೆಂಬ ಪಟ್ಟಿಗೆ ಸೇರುವುದೇ, ಇಲ್ಲವೆ?
- ಧರ್ಮಾಧರ್ಮಾ ವಿಚಾರಗಳನ್ನು ಎಂತಹವರು ಯಾವಯಾವ ಆಧಾರಗಳ ಮೇರೆಗೆ ಮಾಡಬೇಕು, ಮತ್ತು ಮಾಡಬಾರದು?
- ಮತಾಂತರ ಧರ್ಮಾಂತರಗಳಿಂದ ರಾಷ್ಟ್ರವು ನಾಶವಾಗುಹುದಾದರೆ, ರಾಷ್ಟ್ರವೆಂಬುದೇನು?
- ನಮ್ಮ ಸಂಸ್ಕೃತಿ ಎಂದು ಯಾವುದನ್ನು ಯಾರು ಅನುಸರಿಸಬೇಕು?
- ಒಂದು ರಾಷ್ಟ್ರವೆಂದರೆ ಅದಕ್ಕೆ ಪ್ರಧಾನವಾದ ಧರ್ಮ ಯಾವುದಾದರೊಂದು ಇರಬೇಕೆ, ಬೇಡವೆ?
- ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ, ನಡವಳಿಕೆಗಳು, ಚರಸ್ಥಿರ ವಸ್ತುಗಳು, ಜನರು, ಜನರ ಜೀವನಕ್ರಮ, ಇದೆಲ್ಲವೂ ರಾಷ್ಟ್ರವೋ, ಅಲ್ಲವೋ?
- ಮಾನವ ಶಬ್ದ ಅರ್ಥ ಅವನು ಮನುಜ ಎಂದಲ್ಲವೆ? ಇವನು ದಿತಿಜ ದನುಜ ಅತಿದಿಜ ಅಲ್ಲ. ಮಾನವತೆಯ ಲಕ್ಷಣ ಮನುವಿನ ಅನುಸರಣ ಭಾರತ ಜನತೆಗೆ ಬೇಕೋ, ಬೇಡವೋ, ಬೇಡವಾದರೆ ಮಾನವತೆ ಉಳಿದೀತೆ, ಬೇಕಾದರೆ ಮಾನವತೆಯ ಲಕ್ಷಣಗಳೇನು?
- ಭಾರತೀಯ ಪರಂಪರೆ ಬೇಕೆ, ಬೇಡವೆ, ಅದರಲ್ಲಿನ ದೋಷಗಳನ್ನು ಪರಿಹರಿಸಬೇಕೆ, ಬೇಡವೆ, ಪರಿಹಾರೋಪಾಯ ಯಾವುದು?
- ಅಭಾರತೀಯತೆಯು ಭಾರತೀಯ ಪರಂಪರೆಯಾದೀತೆ, ನಾಡು-ನುಡಿಗಳಿಗೆ ನಾಶಕವಾದ ಸಂಸ್ಕೃತಿ ಅವಶ್ಯಕವೇ?
- ಕನ್ನಡನಾಡು ಆಂಗ್ಲನಾಡಾಗಲು ಮುಸ್ಲಿಂನಾಡಾಗಲು ಬಿಡಬೇಕೆ, ಆಗುತ್ತಿರುವ ಮತಾಂತರ, ಆಗಿರುವ ಮತಾಂತರಗಳು ನಾಡಿಗೆ, ನುಡಿಗೆ ನಾಶಕಗಳೇ, ಅಲ್ಲವೇ?
- ಸಾಹಿತ್ಯದಲ್ಲಿ ಮಾನವತೆಯ ರಕ್ಷಣೆಗೆ ಅನುಕೂಲವಾಗಿ ಬರೆಯಬೇಕೆ ಪ್ರತಿಯಾಗಿ ಪ್ರತೀಕಾರ ಪರವಾಗಿ ಬರೆಯಬೇಕೆ?
- ಮೈತ್ರಿಕರುಣೆ ಮುದಿತ ಉಪೇಕ್ಷೆ ಭಾವಗಳು ವೈಯಕ್ತಿಕ ನೆಮ್ಮದಿಗೆ ಕಾರಣಗಳು. ಇದು ಯೋಗ ಶಾಸ್ತ್ರದ ವಿಷಯ. ಸಮಾಜದಲ್ಲಿ ಎಲ್ಲ ವಲಯಗಳಲ್ಲಿ, ಸಮಾಜದ ನೆಮ್ಮದಿಗೆ ಇವುಗಳನ್ನು ಬಳಸುವುದು ಹೇಗೆ?

* * *

ಜನಪದ ವ್ಯಕ್ತಿ

ಸುಭಾಷಿಣಿ ಮಿಸ್ತ್ರೀ

ಸುಭಾಷಿಣಿ ಮಿಸ್ತ್ರೀ ಓರ್ವ ಸಾಮಾನ್ಯ ಮಹಿಳೆಯ ಅಸಾಮಾನ್ಯ ಸಾಹಸದ ಪ್ರತಿರೂಪ. ಈಕೆ ಪಶ್ಚಿಮ ಬಂಗಾಳದವಳು. ಹುಟ್ಟಿದಾಗ ಇಡೀ ರಾಜ್ಯದಲ್ಲಿ ತಲ್ಲಣಿಸುವ ಕ್ಷಾಮ ಬಿದ್ದಿತು. ಈಕೆಯ ತಂದೆ ಹದಿನಾಲ್ಕು ಮಕ್ಕಳ ಸಣ್ಣ ರೈತ! ಆದ್ದರಿಂದ ಮನೆಯಲ್ಲಿ ಬಡತನ ತಾಂಡವವಾಡುತ್ತಿತ್ತು. ಸುಭಾಷಿಣಿಯ ತಾಯಿ ಭಿಕ್ಷೆ ಬೇಡಿ ಮಕ್ಕಳನ್ನು ಸಾಕುತ್ತಿದ್ದಳು. ದಿನ ಕಳೆದಂತೆ ಸಂಸಾರ ಸಾಗಿಸುವುದು ತುಂಬ ಕಷ್ಟವಾಯಿತು. ಕಷ್ಟಗಳು ಬಂದರೆ ಒಂದರ ಹಿಂದೆ ಒಂದು ಬರುತ್ತವೆ ಎಂಬುದಕ್ಕೆ ಸುಭಾಷಿಣಿ ಸಾಕ್ಷಿಯಾಗಿದ್ದಾಳೆ. ಅಲ್ಪ ಸಮಯದಲ್ಲೇ ಅವಳೊಂದಿಗೆ ಒಡಹುಟ್ಟಿದ ಏಳು ಮಕ್ಕಳು ತೀರಿಕೊಂಡರು. ಸುಭಾಷಿಣಿ ಮಾತ್ರ ಅದೃಷ್ಟವಶಾತ್ ಬದುಕಿಕೊಂಡಳು. ಆದರೆ ಅವಳಿಗೆ ಚಿಕ್ಕವಯಸ್ಸಿನಲ್ಲಿ ಮದುವೆ ಮಾಡಿ ಬಿಟ್ಟರು. ಗಂಡ ಓರ್ವ ಕೂಲಿ ಆಳು. ಮದುವೆ ಆಗಿ ಎಂಟು ವರ್ಷದಲ್ಲಿ ನಾಲ್ಕು ಮಕ್ಕಳ ತಾಯಿಯಾದರು. ಕಲ್ಕತೆಯಲ್ಲಿ ಕೆಲಸ ಮಾಡುತ್ತಿದ್ದ ಅವಳ ಗಂಡ ಖಾಯಿಲೆಗೆ ತುತ್ತಾದ. ಅವನನ್ನು ಆಸ್ಪತ್ರೆಗೆ ಸೇರಿಸಿದಳು. ಆ ಆಸ್ಪತ್ರೆ ರೋಗಿಗಳಿಗೆ ಉಪಚಾರ ಮಾಡುವುದಕ್ಕಿಂತ ಶಿಕ್ಷೆ ಕೊಡುವಂಥಾಗಿತ್ತು. ಒಳ್ಳೆಯ ಚಿಕಿತ್ಸೆ ಕೊಡಿಸಲು ಅವಳ ಬಳಿ ಹಣವಿರಲಿಲ್ಲ. ಆದ್ದರಿಂದ ಅವಳ ಗಂಡ ಅಸುನೀಗಿದ. ಆದರೆ ಸುಭಾಷಿಣಿ ಧೈರ್ಯಗೆಡಲಿಲ್ಲ. ಕಲ್ಕತ್ತೆಗೆ ಹೋಗಿ ತರಕಾರಿ ವ್ಯಾಪಾರ ಆರಂಭಿಸಿದಳು. ಕಷ್ಟ ಪಟ್ಟು ಸಂಪಾದನೆ ಮಾಡಿ ಪ್ರತಿ ತಿಂಗಳು ಉಳಿತಾಯ ಖಾತೆಯಲ್ಲಿ ೫೦೦ ರೂಪಾಯಿ ಉಳಿಸುತ್ತಾ ಬಂದಳು. ಹೇಗಾದರೂ ಮಾಡಿ ಬಡವರ ಸಹಾಯ ಮಾಡುವಂಥಾ ಆಸ್ಪತ್ರೆ ಕಟ್ಟಬೇಕೆಂದು ತೀರ್ಮಾನಿಸಿದಳು. ಬೇರೆಯವರ ಮನೆಯಲ್ಲಿ ಮನೆಗೆಲಸ ಮಾಡಲು ಆರಂಭಿಸಿದಳು. ಗಂಡನ ಊರಿನಲ್ಲಿ ಹತ್ತು ಸಾವಿರ ರೂ ಕೊಟ್ಟು ಒಂದು ಎಕರೆ ಜಾಗ ಖರೀದಿಸಿದಳು.

ಕಲ್ಕತ್ತಾ ನಗರವನ್ನು ಬಿಟ್ಟು ಗಂಡನ ಉರಿಗೆ ಹೋಗಿ ಅಲ್ಲಿ ಒಂದು ಸಣ್ಣ ಗುಡಿಸಲು ಕಟ್ಟಿಸಿ ಆಸ್ಪತ್ರೆಯನ್ನು ಆರಂಭಿಸಿದಳು. ಉಚಿತವಾಗಿ ಸೇವಾ ಕೆಲಸ ಮಾಡುವ ವೈದ್ಯರನ್ನು ಹುಡುಕಿದಳು. ಡಾ.ರಘುಪತಿ ಚಟರ್ಜಿ ಮುಂದೆ ಬಂದರು. ಕ್ರಮೇಣ ಬೇರೆ-ಬೇರೆ ತಜ್ಞ ವೈದ್ಯರು ಬಂದರು. ಆ ಗುಡಿಸಲಿನ ಆಸ್ಪತ್ರೆಗೆ 'ಹ್ಯೂಮ್ಯಾನಿಟಿ' ಎಂದು ಹೆಸರಿಡಲಾಯಿತು. ಕಾಲ ಕಳೆಯುತ್ತಿದ್ದಂತೆ ಮಗ ಅಜಯ್ ವೈದ್ಯನಾಗಿ ಹೊರಬಂದ. ಕೊನೆಗೆ ಎಲ್ಲರೂ ಸೇರಿ ೩ ಎಕರೆ ಜಾಗದಲ್ಲಿ ಒಂದು ದೊಡ್ಡ ಸುಸಜ್ಜಿತ ಆಸ್ಪತ್ರೆಯನ್ನು ಸುಭಾಷಿಣಿ ಕಟ್ಟಿದಳು. ಇಷ್ಟೆಲ್ಲ ಮಾಡಿದ ಮೇಲೂ ಸುಭಾಷಿಣಿ ಮನೆಕೆಲಸ ಮಾಡುವುದು ಮತ್ತು ತರಕಾರಿ ಮಾರುವುದನ್ನು ಬಿಡಲಿಲ್ಲ. ಅತ್ಯಂತ ಸಾಮಾನ್ಯ ಮಹಿಳೆ ಸುಭಾಷಿಣಿ ಕಲ್ಕತ್ತಾ ನಗರದಲ್ಲಿ ಒಂದು ಸುಸಜ್ಜಿತ ಆಸ್ಪತ್ರೆ ನಡೆಸುತ್ತಿರುವುದು ಒಂದು ಪವಾಡವಲ್ಲದೇ ಮತ್ತೇನು?

* * *

ಸರ್ವೋದಯ

– *ಸಂಪಟೂರು ವಿಶ್ವನಾಥ್*

'ಸರ್ವೇ ಜನಾಃ ಸುಖಿನೋ ಭವಂತು', 'ಎಲ್ಲರೂ ಸುಖವಾಗಿರಲಿ', ಎಂಬ ತತ್ವ ನಮ್ಮ ದೇಶದಲ್ಲಿ ಅನಾದಿ ಕಾಲದಿಂದಲೂ ಆಚರಣೆಯಲ್ಲಿದೆ. ಇದನ್ನೇ ಇಂದಿನ ಕಾಲದವರು ಸಮಾಜವಾದ, ಸರ್ವೋದಯ, ಕಲ್ಯಾಣರಾಜ್ಯ, ರಾಮರಾಜ್ಯ ಎಂದು ವಿವರಿಸುತ್ತಾರೆ.

'ಸರ್ವೋದಯ' ಎಂದರೆ ಸಕಲರ ಕಲ್ಯಾಣ. ಈ ಪದವನ್ನು ಬಳಕೆಗೆ ತಂದು, ಅದನ್ನು ವ್ಯಕ್ತಿಗೂ ಸಮಾಜಕ್ಕೂ ಬದುಕಿನ ವಿಧಾನವನ್ನಾಗಿ ನಿರೂಪಿಸಿದವರು ಮಹಾತ್ಮಾ ಗಾಂಧೀಜಿಯವರು. ಗಾಂಧೀಜಿಯವರ 'ಸರ್ವೋದಯ' ಕಾರ್ಯಕ್ರಮವನ್ನು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದು, ಜೀವನ ಧರ್ಮವನ್ನಾಗಿ ಸ್ವೀಕರಿಸಿದವರಲ್ಲಿ ಪ್ರಮುಖರು ಆಚಾರ್ಯ ವಿನೋಬ ಭಾವೆ ಮತ್ತು ಜಯಪ್ರಕಾಶ್ ನಾರಾಯಣರು.

ಸರ್ವೋದಯ ತತ್ವಗಳನ್ನು ಪ್ರತಿಪಾದಿಸಲು ಗಾಂಧೀಜಿಯವರನ್ನು ಪ್ರೇರೇಪಿಸಿದ್ದು, ಜಾನ್ ರಸ್ಕಿನ್ ಎಂಬ ಹತ್ತೊಂಭತ್ತನೆಯ ಶತಮಾನದ ಇಂಗ್ಲೆಂಡಿನ ಲೇಖಕನ ಕೃತಿ 'ಅನ್‌ಟು ದಿಲಾಸ್ಟ್'. ಗಾಂಧೀಜಿಯವರು ಆಫ್ರಿಕಾದಲ್ಲಿ ವಕೀಲರಾಗಿದ್ದಾಗ ಈ ಗ್ರಂಥವನ್ನು ಓದಿ, ಗುಜರಾತಿ ಭಾಷೆಗೆ ಭಾಷಾಂತರಿಸಿ 'ಸರ್ವೋದಯ' ಎಂದು ಹೆಸರಿಟ್ಟರು.

'ಸರ್ವೋದಯ'ದ ಕೆಲವು ತತ್ವಗಳು ಹೀಗಿವೆ;

ಸರಿಯಾಗಿ ಬದುಕಲು ಕೆಲಸ ಮಾಡಬೇಕು. ಕೆಲಸ ಮಾಡುವ ಅಧಿಕಾರ ಎಲ್ಲರಿಗೂ ಸಮನಾಗಿದೆ. ಇದರಿಂದ ಪ್ರಾಮಾಣಿಕನಾಗಿ ದುಡಿಯುವ ವೈದ್ಯನಿಗಿರುವಷ್ಟೇ ಗೌರವ ಒಬ್ಬ ಕ್ಷೌರಿಕನ ಕೆಲಸಕ್ಕೂ ಇದೆ. ಇದನ್ನೇ ಇಂಗ್ಲೀಷ್‌ನಲ್ಲಿ ಡಿಗ್ನಿಟಿ ಆಫ್ ಲೇಬರ್ ಎನ್ನುತ್ತಾರೆ. ಇಂಥಾ ಕೆಲಸ ಮೇಲು ಇಂಥಾ ಕೆಲಸ ಕೀಳು ಎಂಬುದು ಇಲ್ಲ.

ನಮ್ಮ ದೇಶದಲ್ಲಿ ಜನಸಂಖ್ಯೆ ಹೆಚ್ಚು. ಪ್ರತಿಯೊಬ್ಬನೂ ಸಮಾಜದ ಒಂದು ಭಾಗ. ತಾನೊಬ್ಬನೇ ಸುಖವಾಗಿದ್ದು ಅಭಿವೃದ್ಧಿ ಕಾಣಲು ಸಾದ್ಯವಿಲ್ಲ. ಸಮಾಜಕ್ಕೆ ಒಳ್ಳೆಯದಾದರೆ ಮಾತ್ರ ಅವನಿಗೆ ಒಳ್ಳೆಯದಾಗುತ್ತದೆ. ಸರ್ವರ ಹಿತಕ್ಕಾಗಿ ದುಡಿಯುವುದೇ ನಿಸ್ವಾರ್ಥ ಸೇವೆ. ಇದೇ ಸಮಾಜಸೇವೆ.

ಉಳ್ಳವರು ತಮಗೆ ಬೇಕಾದಷ್ಟನ್ನು ಮಾತ್ರ ಉಳಿಸಿಕೊಂಡು ಉಳಿದ್ದಿದ್ದನ್ನು ದಾನ ಮಾಡಿದರೆ ರಕ್ತಪಾತವಾಗುವುದಿಲ್ಲ. ಇದನ್ನೇ ಬಸವಣ್ಣನವರು 'ದಾಸೋಹ' ಎಂದು ಕರೆದಿದ್ದು.

ಆಚಾರ್ಯ ವಿನೋಬಾ ಭಾವೆಯವರ ಭೂದಾನ ಚಳವಳಿಯ ಮೂಲ ತತ್ವವೂ ದಾಸೋಹವೇ. ಭೂದಾನ ಚಳವಳಿ ಪ್ರಾರಂಭವಾದದ್ದು ೧೯೫೧ರ ಮಾರ್ಚ್ ೧೮ರಂದು. ಇದೊಂದು ಅಹಿಂಸಾ ಕ್ರಾಂತಿ. ತೆಲಂಗಾಣದಲ್ಲಿ ದಾನ ಬಂದ ಹೊಲ ೫,೬೬೬ ಎಕರೆ. ವಾರ್ಧಾದಿಂದ ದೆಹಲಿಗೆ ಎರಡು ತಿಂಗಳ ಪಾದಯಾತ್ರೆಯ ಫಲವಾಗಿ ೭,೨೮೪ ಎಕರೆ ಸಿಕ್ಕಿತು, ಉತ್ತರ ಪ್ರದೇಶದಲ್ಲಿ ೪೦,೪೭೦ ಎಕರೆ ಸಿಕ್ಕಿತು.

ಭೂದಾನ ಯಾತ್ರೆಗಾಗಿ ವಿನೋಬಾರವರು ಪ್ರತಿನಿತ್ಯ ೧೫ರಿಂದ ೨೫ ಕಿಲೋಮಿಟರ್ ನಡೆಯುತ್ತಿದ್ದರು. ಬೆಳಗಿನ ಜಾವ ಮೂರು ಕಾಲು ಗಂಟೆಗೆ ಎದ್ದರೆ ಮಲಗುತ್ತಿದ್ದುದು ರಾತ್ರಿ ಒಂಭತ್ತು ಗಂಟೆಗೆ. ವಿನೋಬಾರ ಮನಸ್ಥೈರ್ಯ ಲೋಕವೇ ಮೆಚ್ಚಬೇಕಾದದ್ದು.

"ಹೃದಯ ಪರಿವರ್ತನೆಯಾಗಲು ಕಾನೂನು ಕಾಯಿದೆಗಳು ಅವಶ್ಯವಲ್ಲ", ಎಂದು ನಂಬಿದ್ದ ವಿನೋಬಾಜಿ ಮಧ್ಯಪ್ರದೇಶದ ಅರಣ್ಯ ಪ್ರದೇಶಗಳಿಗೆ ಹೋಗಿ ದರೋಡೆಕೋರರರಿಗೆ ಉಪದೇಶ ಮಾಡಿದರು.

ವಿನೋಬಾರವರು ಗಾಂಧೀಜಿಯುವರ ಸರ್ವೋದಯ ಚಳವಳಿಗೆ ಮನಸೋತ ಹಾಗೆ, ವಿನೋಬಾರವರ ಭೂದಾನ ಚಳವಳಿಗೆ ಮನಸೋತು ಕಡೆಯ ಉಸಿರು ಇರುವವರೆಗೂ ದುಡಿದು ಜೀವನದಾನ ಮಾಡಿದ ನಾಯಕ ಜಯಪ್ರಕಾಶ ನಾರಾಯಣರು.

ದಿಟ್ಟ ಸ್ವಾತಂತ್ರ್ಯ ಹೋರಾಟಗಾರರಾಗಿ ಅನೇಕ ಬಾರಿ ಜೈಲು ವಾಸವನ್ನು ಅನುಭವಿಸಿದ ಜೆ.ಪಿ, ಉತ್ತಮ ಸಂಘಟಕರೂ ಆಗಿದ್ದರು. ೧೯೫೨ರ ಕೊನೆಯಲ್ಲಿ ಭೂದಾನ ಚಳವಳಿಯತ್ತ ಆಕರ್ಷಿತರಾದ ಇವರು ಸರ್ವೋದಯ ಸಿದ್ಧಾಂತಕ್ಕೆ ಪೂರ್ತಿ ಒಲಿದು ಬಿಟ್ಟಿದ್ದರು. ಜಯಪ್ರಕಾಶರು ಪಕ್ಷಗತ ರಾಜಕಾರಣದ ಸಿದ್ಧಾಂತವನ್ನು ತಿರಸ್ಕರಿಸಿ, ಪಕ್ಷಾತೀತ ಲೋಕನೀತಿಯ ಅಚಲ ಪ್ರತಿಪಾದಕರಾದರು.

ಭಾರತೀಯ ಸಮಾಜವಾದ ಹಾಗೂ ಸರ್ವೋದಯ ಸಿದ್ಧಾಂತದ ವಿಶಿಷ್ಟ ವ್ಯಾಖ್ಯಾನಕಾರನಾಗಿ ಅವರು ವಿಚಾರವನ್ನು ಶಾಸ್ತ್ರೀಯವಾಗಿ ಪ್ರತಿಪಾದಿಸಿದ್ದಾರೆ. ಜನತಾಂತ್ರಿಕ ಸಮಾಜವಾದ ಹಾಗೂ ಸರ್ವೋದಯ ತತ್ವಗಳನ್ನು ಕುರಿತ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ.

ಸರ್ವೋದಯ ಸಮಾಜದಲ್ಲಿ ಎಲ್ಲರೂ ಸರಿಸಮಾನರು. ಇಲ್ಲಿ ಜಾತಿ ಭೇದಗಳಿಲ್ಲ. 'ಆಲ್ ಫಾರ್ ಒನ್ ಅಂಡ್ ಒನ್ ಫಾರ್ ಆಲ್', ಎನ್ನುವುದೇ ಮೂಲತತ್ವ ಸಾಂಪ್ರಾದಾಯಿಕವಾಗಿ ನಾವು ಯಾವುದೇ ಮತ–ಧರ್ಮಕ್ಕೆ ಸೇರಿರಬಹುದು, ಆದರೆ ಸರ್ವೋದಯ ಧರ್ಮ ಒಂದಿದೆ. ಅದೇ ಶ್ರಮ ಜೀವನ ಮತ್ತು ಪ್ರಾಮಾಣಿಕ ಜೀವನ.

ಸರ್ವೋದಯವಾಗಬೇಕಾದರೆ ಅಹಿಂಸಾ ವ್ರತಾಚರಣೆ, ಅಸ್ಪೃಶ್ಯತೆಯನ್ನು ಆಚರಿಸದಿರುವುದು, ಮದ್ಯಪಾನ ಮಾಡದಿರುವುದು, ಮಾದಕ ಪದಾರ್ಥಗಳನ್ನು ಮುಟ್ಟದಿರುವುದು, ಆಸ್ತಿಯೆಂದು ಏನನ್ನೂ ಸಂಗ್ರಹಿಸದಿರುವುದು, ಇತರರಿಂದ ಏನನ್ನೂ ತೆಗೆದುಕೊಳ್ಳದಿರುವುದು ಮತ್ತು ಹೆಚ್ಚಿನ ಗಳಿಕೆಯ ಬಹುಭಾಗವನ್ನು ರಾಷ್ಟ್ರದ ಕಲ್ಯಾಣಕ್ಕಾಗಿ ಉಪಯೋಗಿಸುವುದು.

ಸರ್ವೋದಯ ಕಾರ್ಯಕರ್ತರು ಇತರರೊಂದಿಗೆ, ಇತರರಿಗಾಗಿ ಬದುಕಿ ಅಗತ್ಯವಾದರೆ ತಮ್ಮನ್ನೇ ಬಲಿಕೊಡಲು ಸಿದ್ಧರಿರಬೇಕು. ಈ ಅಸ್ಥಿಭಾರದ ಮೇಲೆ ಹೊಸ ಸಮಾಜ ಸೃಷ್ಟಿಯಾಗಬೇಕು ಎನ್ನುತ್ತದೆ ಸರ್ವೋದಯ ಸಿದ್ಧಾಂತ.

ಹಿಂದಿಗಿಂತ ಹೆಚ್ಚಾಗಿ ಇಂದು ಈ ಸಿದ್ಧಾಂತದ ಅನುಷ್ಠಾನ ನಮಗೆ ಅವಶ್ಯಕತೆಯಿದೆ. ಈ ನಿಯಮಗಳಲ್ಲಿ ಕೆಲವನ್ನಾದರೂ ನಾವು ಪಾಲಿಸುತ್ತಾ ಬಂದರೆ, ಒಳ್ಳೆಯ ಸಮಾಜಕ್ಕೆ ನಮ್ಮ ದೇಣಿಗೆ ಕೊಟ್ಟಂತೆಯೇ. * * *

ಹೊಸ ಮನುಷ್ಯನನ್ನು ನಿರ್ಮಿಸಬೇಕಿದೆ

– ವಿನೋಬಾ

ವಿಶ್ವಮಾನುಷ

ನಾವು ಹೊಸ ಮನುಷ್ಯನನ್ನು ನಿರ್ಮಿಸಬೇಕಿದೆ. ಆ ಮನುಷ್ಯನಿಗೆ ಋಗ್ವೇದವು ವಿಶ್ವಮಾನುಷ ಎಂಬ ಹೆಸರನ್ನು ಕೊಟ್ಟಿದೆ. ಇಂದು ನಮ್ಮ ಎದುರಿನಲ್ಲಿ ಅನೇಕ ಚಿಕ್ಕ ಚಿಕ್ಕ ಮಾನವರು ನಿಂತಿದ್ದಾರೆ. ಕೆಲವರು ಜಾತಿವಾದಿಗಳು, ಕೆಲವರು ಭಾಷಾವಾದಿಗಳು, ಕೆಲವರು ಪ್ರಾಂತವಾದಿಗಳು, ಕೆಲವರು ಪಂಥವಾದಿಗಳು, ಕೆಲವರು ದೇಶವಾದಿಗಳು, ಕೆಲವರು ಧರ್ಮವಾದಿಗಳು ಇದ್ದಾರೆ. ಜಾತಿ, ಭಾಷೆ, ಪ್ರಾಂತ, ಪಂಥ ಧರ್ಮ ಇವೆಲ್ಲವೂ ನಮ್ಮನ್ನು ಖಂಡಿಸುವಂಥಾದ್ದಾಗಿದೆ. ಈ ಎಲ್ಲವನ್ನೂ ಈಗ ಬದಲಿಸಬೇಕಿದೆ. ಮತ್ತು ವಿಶ್ವಮಾನುಷನನ್ನು ನಿರ್ಮಿಸಬೇಕಿದೆ. ಎಲ್ಲಿ ಮಾನವನ ದರ್ಶನದಿಂದ ಅಭೇದದ ಅನುಭವವಾಗುವುದಿಲ್ಲವೋ ಅಲ್ಲಿ ಧರ್ಮವಿರುವುದಿಲ್ಲ. ಮಹಾಭಾರತದಲ್ಲಿ ವೇದ ವ್ಯಾಸರು ಹೀಗೆ ಹೇಳಿದ್ದಾರೆ.

ಸರ್ವೇಶ್ಯಾಂಯಃ ಸುಹೃತ್ ನಿತ್ಯಂ ಸರ್ವೇಶ್ಯಾಂ ಚ ಹಿತೇರತಃ
ಕರ್ಮಣಾ ಮನಸಾ ವಾಚಾ ಸ ಧರ್ಮ ವೇದ ನೇತರಃ

ಎಲ್ಲರ ಹಿತದಲ್ಲಿ ಯಾರು ಮಗ್ನರಾಗಿರಿತ್ತಾರೋ, ಯಾರು ಮನ-ವಚನ-ಕರ್ಮದಲ್ಲಿ ಎಲ್ಲರ ಮಿತ್ರರಾಗಿರುತ್ತಾರೋ ಅವರಿಗೇ ಧರ್ಮ ಅರ್ಥವಾಗುತ್ತದೆ, ಬೇರೆಯವರಿಗಲ್ಲ.

ವೇದದ ಕಾಲದಲ್ಲಿ ಇತ್ತಿಂದ-ಅತ್ತ ಹೋಗುವುದು ಕಷ್ಟವಾಗಿತ್ತು. ಮಧ್ಯದಲ್ಲಿ ದೊಡ್ಡ-ದೊಡ್ಡ ಅರಣ್ಯಗಳಿದ್ದವು. ವಿಶ್ವದ ತಿಳುವಳಿಕೆ ಇರಲಿಲ್ಲ. ಯಾರಿಗೂ ಇನ್ನೊಬ್ಬರ ಪರಿಚಯವಿರಲಿಲ್ಲ ಆದರೆ ವಿಶಾಲ ವಿಶ್ವದ ಕಲ್ಪನೆ ಋಷಿಗಳಿಗಿತ್ತು. ನಾವು ಒಂದು ವಿಶ್ವದ ಮಾನುಷರೆಂಬ ಭಾವನೆಯಿತ್ತು. ಋಷಿಗಳ ಚಿಂತನದ ವಿಶೇಷತೆ ಇದಾಗಿತ್ತು. ಚಿಂತನೆಯ ಕಾರಣದಿಂದ ವಿಶ್ವಮಾನುಷತೆ ಬಂತು ಮತ್ತು ನಾವು ಪೃಥ್ವಿಯವರು ಎಂಬ ಭಾಷೆ ಹೊರಟಿತು. ಇದು ಋಷಿಗಳ ಪ್ರತಿಭೆ.

ಋಷಿಗಳ ಧ್ಯಾನ-ಸೃಷ್ಟಿಯ ವಿಶಾಲತೆಯಲ್ಲಿ ಇಡೀ ವಿಶ್ವ ಸೇರಿಕೊಳ್ಳುತ್ತದೆ. ಅವರು ಧ್ಯಾನಸ್ಥರಾದಾಗ ದೇಹದ ರಚನೆಯನ್ನು ಕಳಚಿ ಹಾಕಿ ಇಡೀ ಪ್ರಪಂಚದೊಂದಿಗೆ ಒಂದು ರೂಪವಾಗಿ ಬಿಡುತ್ತಾರೆ. ಮತ್ತು ಅವರಿಗೆ ಇನ್ನೂ ಮುಂದಿನದು ದರ್ಶನವಾಗುತ್ತದೆ. ಆದ್ದರಿಂದ ಋಷಿಗಳ ವಾಣಿಯಲ್ಲಿ ನಮಗೆ ವ್ಯಾಪಕತೆಯ ದರ್ಶನವಾಗುತ್ತದೆ. ಹತ್ತು ಸಾವಿರ ವರ್ಷಗಳ ಹಿಂದೆ ಓರ್ವ ಋಷಿಯ ವಾಣಿಯಿಂದ ವಿಶ್ವಮಾನುಷ ಎಂಬ ಶಬ್ದ ಹೊರಟಿತು. ಋಗ್ವೇದದ ೮ನೇ ಮಂಡಲದಲ್ಲಿ ಈ ಶಬ್ದ ಬಂದಿದೆ ಇಡೀ ಋಗ್ವೇದದಲ್ಲಿ ಒಂದೇ ಸಲ ಈ ಶಬ್ದ ಬಂದಿದೆ ಆದರೆ ಅದು ಅತ್ಯಂತ ಮಹತ್ವದ್ದಿದೆ.

ಜ್ಞಾನ ದೇವರು ಜ್ಞಾನೇಶ್ವರಿ ಬರೆದು ಯಾರಿಗೆ ಸಮರ್ಪಣ ಮಾಡಿದರು?

ಈ ವಾಗ್ಯಜ್ಞದಿಂದ ವಿಶ್ವಾತ್ಮಕನಾದ ದೇವರ ಪೂಜೆ ಮಾಡುತ್ತಿದ್ದೇನೆ. ಅವರ ಬಾಯಿಂದ ಸಣ್ಣ ಮಾತು ಹೊರಡಲೇ ಇಲ್ಲ, ಆದಾಗ್ಯೂ ಅವರು ಮರಾಠಿಯಲ್ಲಿ ಬರೆದರು. ಏಕೆಂದರೆ ಅದೇ ಅವರ ಭಾಷೆಯಾಗಿತ್ತು. ಆದರೆ ಅವರು ವಿಶ್ವಕ್ಕಿಂತ ಚಿಕ್ಕ ಅರ್ಥದ ಶಬ್ದವನ್ನು ಉಪಯೋಗಿಸಲಿಲ್ಲ. ಭಕ್ತ ಲಕ್ಷಣಗಳ ಮೇಲೆ ಭಾಷ್ಯ ಬರೆಯುತ್ತಾ ಜ್ಞಾನ ದೇವರು ಹೀಗೆ ಬರೆದಿದ್ದಾರೆ.– "ಇಡೀ ವಿಶ್ವವೇ ನನ್ನ ಮನೆ. ಇಂಥ ಮಾತು ಯಾರ ಬುದ್ಧಿಯಲ್ಲಿ ಸ್ಥಿರವಾಗಿದೆಯೋ ಮತ್ತು ಯಾರು ಸ್ವಯಂ ಇಡೀ ಚರಾಚರ ಸೃಷ್ಟಿಯಾಗಿದ್ದಾನೆ ಅವನು ಭಕ್ತ".

ತುಕಾರಾಂರನ್ನು ನಿಮ್ಮ ದೇಶ ಯಾವುದೆಂದು ಕೇಳಿದಾಗ ಅವರು "ನನ್ನ ಸ್ವದೇಶ ಭುವನತ್ರಯ". ನಾನು ತ್ರಿಭುವನದಲ್ಲಿ ಇರುವಂಥವ. ದೇಹದಂಥ ಚಿಕ್ಕ ಹಳ್ಳಿಯಲ್ಲಿ ಇರುವ, ಮರಾಠಿ ಬರೆಯುವ ಆತ ಇಷ್ಟು ದೊಡ್ಡ ಮಾತನ್ನು ಹೇಗೆ ಹೇಳುತ್ತಾನೆ? ಇದಕ್ಕೆ ಕಾರಣವೇನೆಂದರೆ ಭಾರತದಲ್ಲಿ ಒಂದು ರಾಷ್ಟ್ರೀಯತೆಯ ಬದಲಾಗಿ ಒಂದು ವಿಶ್ವತೆಯಿತ್ತು. ಋಷಿಗಳ ದರ್ಶನ ವಿಶ್ವಮಾನುಷವಿತ್ತು. ನಾವು ಬ್ರಾಹ್ಮಣ, ಹಿಂದೂ, ಭಾರತೀಯರಲ್ಲ. ನಾವು ವಿಶ್ವದ ಪ್ರತಿನಿಧಿ, ವಿಶ್ವಮಾನುಷರಿದ್ದೇವೆ. ಈ ರೀತಿ ಆಲೋಚಿಸುವುದರಿಂದ ಹೃದಯ, ಬುದ್ಧಿ ವಿಶಾಲವಾಗುತ್ತವೆ, ಮಹಾನ್ ಆಗುತ್ತದೆ.

ಈ ಪೃಥ್ವಿ ಪರಮೇಶ್ವರನ ಆಸ್ಥಾನವೆಂದು ನಮ್ಮ ಭಾವನೆ. ಮಾನವತೆಗೆ ಈ ಪೃಥ್ವಿಯಲ್ಲದೆ ಬೇರೆಯಾವ ಆಧಾರವೂ ಇಲ್ಲ. ಆದ್ದರಿಂದ ನಮ್ಮದು ಪೂರ್ಣತಃ ಪೈಶ್ವನರಾ ವೃತ್ತಿಯಾಗಿರಬೇಕು. ನಾವು ವಿಶ್ವಮಯ ಮನುಷ್ಯರಾಗಬೇಕಿದೆ. ಇದು ವಿಜ್ಞಾನ ಯುಗದ ಆಹ್ವಾನವಾಗಿದೆ ಮತ್ತು ಆತ್ಮಜ್ಞಾನದ ಆಶ್ವಾಸನವಾಗಿದೆ. ವಿಜ್ಞಾನ ಮತ್ತು ಆತ್ಮಜ್ಞಾನವೆರಡು ಸಂಕುಚಿತತೆಯ ಮೇಲೆ ಪ್ರಹಾರ ಮಾಡುತ್ತಿವೆ. ನಾವು ಇದನ್ನು ತಿಳಿಯಬೇಕು ಮತ್ತು ವಿಶಾಲ ದೃಷ್ಟಿಯನ್ನು ಶಾಶ್ವತವಾಗಿ ಇಟ್ಟುಕೊಂಡು ಕೆಲಸ ಮಾಡಬೇಕು. ಅನಂತರ ನಮ್ಮ ಮನೆಯ ಕೆಲಸವನ್ನೇ ಮಾಡಲಿ ಅಥವಾ ನಮ್ಮ ಓಣಿಯ ಸ್ವಚ್ಛತೆಯನ್ನೇ ಮಾಡಲಿ ಅಥವಾ ಒಂದೆರಡು ರಾಜ್ಯವನ್ನೇ ನಡೆಸಲಿ ಆಗಲೂ ಯಾವ ಅಭ್ಯಂತರವಿಲ್ಲ. ಆಗಲೇ ನಾವು ಉಳಿಯಬಲ್ಲೆವು. ಪೃಥ್ವಿಯ ಮೇಲೆ ಯಾವ-ಯಾವ ಪ್ರಕಾರದ ಮನುಷ್ಯನಿದ್ದಾನೋ ಅವನು ನನ್ನ ರೂಪವೇ ಆಗಿದ್ದಾನೆ ಮತ್ತು ನಾನು ಅವನ ರೂಪವಾಗಿದ್ದೇನೆ. ಮನುಷ್ಯನನ್ನು ನೋಡಿದ ಕ್ಷಣ ನನ್ನ ಆತ್ಮವೇ ನನಗೆ ದೊರೆಯುತ್ತಿದೆಯೆಂಬ ಅನುಭೂತಿ ಬರಲು ಅವಕಾಶ ಕೊಡಬೇಕು.

(ಮುಂದುವರಿಯುತ್ತದೆ)

* * *

ಯಂತ್ರಗಳನ್ನು ಕಳಚೋಣ ಬನ್ನಿ

- ಪ್ರಸನ್ನ

(ಈಗ ತಾನೆ ಪ್ರಕಟವಾಗಿರುವ ಮೇಲ್ಕಾಣಿಸಿದ ಶೀರ್ಷಿಕೆಯ ಪುಸ್ತಕದ ಒಂದು ಭಾಗ - ಸಂ)

I don't know who I am or was, I know only my chaos.
- Guan Gelman (Argentine Poet)

ಯಂತ್ರಗಳನ್ನು ಬಲವಂತದಿಂದ ಧ್ವಂಸ ಮಾಡಬಹುದೇ? ಅಥವಾ ಎಲ್ಲೆಲ್ಲಿ ಕಾರ್ಖಾನೆಗಳಿವೆಯೋ ಅಲ್ಲಿಗೆ ಹೋಗಿ ಪಿಕೆಟಿಂಗ್ ಮಾಡಿ, ಕಾರ್ಖಾನೆಗಳನ್ನು ಮುಚ್ಚಿಸಬಹುದೇ? ಅಥವಾ ವಿಧ್ವಂಸಕ ಕೃತ್ಯಗಳ ಮೂಲಕ - ಅರ್ಥಾತ್ ಮುಳ್ಳನ್ನು ಮುಳ್ಳಿನಿಂದಲೇ ತೆಗೆಯುವ ಮೂಲಕ, ಯಂತ್ರಗಳನ್ನು ಉಡಾಯಿಸಬಹುದೇ? ಹಾಗೆ ಮಾಡಲಾಗದು. ಏಕೆಂದರೆ, ಇಡೀ ಮಾನವ ಜನಾಂಗವೇ ಯಂತ್ರ ನಾಗರೀಕತೆಯಲ್ಲಿ ಕರಗಿಹೊಗಿದೆ. ಮಾನವರೇ ಏಕೆ, ಪ್ರಕೃತಿ, ಪ್ರಾಣಿಸಂಕುಲಗಳು ಸಹ ಯಂತ್ರ ನಾಗರೀಕತೆಯ ಪ್ರಭಾವಕ್ಕೆ ಒಳಗಾಗಿದೆ.

ಮನುಷ್ಯನಂತೂ ಯಂತ್ರಗಳಿಲ್ಲದೆ ನಡೆಯಲಾರ, ಮಲಗಲಾರ, ಯೋಚಿಸಲಾರ, ರಂಜಿಸಲಾರ, ಪ್ರೀತಿಸಲಾರ, ಉಸಿರಾಡಲಾರ. ನಾವು ಬಿಡಿ! ನಮ್ಮ ಮಕ್ಕಳು ನಮಗಿಂತ ಮಿಗಿಲಾಗಿ, ಯಂತ್ರಗಳ ದಾಸರಾಗಿದ್ದಾರೆ; ನಾವು ಬಯಸಿ ದಾಸರಾದರೆ, ಅವರು, ಬಯಸದೆ, ತಿಳಿಯದೆ ಯಂತ್ರ ನಾಗರೀಕತೆಯೊಳಗೆ ಮುಗ್ಧ ರೀತಿಯಲ್ಲಿ ಹುಟ್ಟಿದ್ದಾರೆ. ಇಂದಿನ ಮಕ್ಕಳಿಗೆ ನದಿ ತೊರೆ ಬೆಟ್ಟ ಗುಡ್ಡ ಕಾಡು ಮೇಡುಗಳಷ್ಟೇ ಸಹಜವಾದದ್ದು, ಯಂತ್ರಚಾಲಿತ ವಾಹನಗಳು, ಕಂಪ್ಯೂಟರ್‌ಗಳು, ಕಾಂಕ್ರೀಟು ಹಾಗೂ ಗಾಜಿನ ಮನೆಗಳು. ಯಂತ್ರಗಳನ್ನು ಕಳಚುವುದು ಸುಲಭದ ಮಾತಲ್ಲ.

ಯಂತ್ರಗಳಿಗೆ ಕೊಡುವ ಪ್ರತಿಯೊಂದು ಪೆಟ್ಟು, ಅದನ್ನು ಅಪ್ಪಿ ಹಿಡಿದಿರುವ ಮಾನವ ಕೈಗಳ ಮೇಲೆ ಬೀಳುತ್ತದೆ. ಯಂತ್ರಗಳ ಮೇಲೆ ನಡೆಸುವ ಪ್ರತಿಯೊಂದು ಬಲವಂತವೂ ಮಾನವರ ಮೇಲೆ ನಡೆಸುವ ಬಲವಂತವೇ ಆಗುತ್ತದೆ. ಕೋಟ್ಯಾಂತರ ಯಂತ್ರ ಚಾಲಕರು ಕೆಲಸ ಕಳೆದುಕೊಳ್ಳುತ್ತಾರೆ. ಅಪಾರವಾದ ನೋವು ಹಾಗೂ ರಾಜಕೀಯ ಹಿಂಸೆಗಳಿಗೆ ಚಳುವಳಿಯು ಕಾರಣವಾಗುತ್ತದೆ. ಪೆಟ್ಟು ಕೊಟ್ಟು ಯಂತ್ರಗಳನ್ನು ಕಳಚುವುದು ಖಂಡಿತಾ ಸಾಧ್ಯವಿಲ್ಲ.

ನಾವು ಅಷ್ಟಾಗಿ ಗಮನಿಸದ ಸರಳ ಸತ್ಯವೊಂದಿದೆ. ಅದೆಂದರೆ, ಯಂತ್ರಗಳು ನಮ್ಮನ್ನು ಹಿಡಿದಿಲ್ಲ, ನಾವೇ ಯಂತ್ರಗಳನ್ನು ಹಿಡಿದಿದ್ದೇವೆ; ಎಲ್ಲಿ ಅವು, ನಮ್ಮ ಕೈಬಿಟ್ಟು ಹೋಗುವವೋ ಎಂಬ ಹೆದರಿಕೆಯಿಂದ ಹಿಡಿದಿದ್ದೇವೆ. ನಿರ್ಜೀವವಾದ ಯಂತ್ರಗಳು, ತಂತಾನೆ ಯಾರನ್ನೂ ಹಿಡಿಯಲಾರವು, ಅಥವಾ ಯಾರನ್ನೂ ಬಿಡಲಾರವು. ಹಾಗಾಗಿ ಯಂತ್ರಗಳನ್ನು ಕಳಚುವುದೆಂದರೆ, ಯಂತ್ರಗಳ ಮೇಲಿನ ನಮ್ಮ ಹಿಡಿತವನ್ನು ಕಳಚುವುದು ಎಂದಷ್ಟೆ ಅರ್ಥ; ಅಂದರೆ ಯಂತ್ರಗಳ ಮೇಲಿನ ನಮ್ಮ ಅವಲಂಬನೆಯನ್ನು ಕಳಚುವುದು ಎಂದರ್ಥ. ಯಂತ್ರಗಳನ್ನು ಕಳಚಬೇಕಾಗಿದರುವುದು ನಮ್ಮ ಬದುಕಿನಲ್ಲಿ, ಕಾರ್ಖಾನೆಗಳಲ್ಲಲ್ಲ.

ಯಂತ್ರಗಳ ಮೇಲಿನ ಅವಲಂಬನೆಯನ್ನು ಕಳಚಿದಾಗ, ಯಂತ್ರಗಳು ತಂತಾನೆ

ಉದುರಿಹೋಗುತ್ತವೆ. ಬೇಡಿಕೆ ಕುಸಿದಂತೆ, ಹೊಸ ಯಂತ್ರಗಳ ತಯಾರಿಕೆಯೂ ಕುಸಿಯುತ್ತದೆ, ಒಂದು ದಿನ ಸಂಪೂರ್ಣವಾಗಿ ನಿಂತು ಹೋಗುತ್ತದೆ. ಆಗ ಯಂತ್ರಗಳನ್ನು ಅಪ್ಪಿ ಹಿಡಿದಿರುವ ನಮ್ಮ ಕೈಗಳು ತೆರವಾಗಿ, ಕೈ ಕೆಲಸಗಳಿಗೆ ಲಭ್ಯವಾಗುತ್ತದೆ; ಕಾಲುಗಳು ನಡಿಗೆಗೆ ಲಭ್ಯವಾಗುತ್ತದೆ, ಕಣ್ಣು ಕಿವಿಗಳು ನಿಜವಾದ ಮನರಂಜನೆ, ನಿಜವಾದ ಮಾತುಕತೆಗಳಿಗೆ ಲಭ್ಯವಾಗುತ್ತದೆ. ಮನಸ್ಸು ಪ್ರಕೃತಿಯತ್ತ ಹೊರಳುತ್ತದೆ, ನಾಲಗೆ ಸಹಜ ರುಚಿಯನ್ನು ಬೇಡುತ್ತದೆ, ಆತ್ಮವು ದೇವರನ್ನು ಧ್ಯಾನಿಸುತ್ತದೆ. ಮನುಷ್ಯನ ಸಹಜ ಜೀವನಕ್ಕೆ ಅಡ್ಡಿ ಬಾರದ ಕೆಲವು ಸರಳ ಯಂತ್ರಗಳು ಪ್ರಾಯಶಃ ಉಳಿಯುತ್ತವೆ, ಉಳಿಯಲಿ. ಇತ್ತ ಯಂತ್ರ ತಯಾರಿಕರಿಗೆ, ವೃತ್ತಿ ಬದಲಾವಣೆಗೆ ಸಮಯ ಸಿಕ್ಕುವುದರಿಂದ ಅವರೂ ನಿರ್ನಾಮವಾಗುವುದಿಲ್ಲ.

ಯಂತ್ರಗಳ ಅಡಿಯಾಳಾಗಿರುವ ನಾವು ಕ್ರಮಕ್ರಮವಾಗಿ ಬಿಡುಗಡೆ ಪಡೆಯಬೇಕಿದೆ. ಆದರೆ ಸಣ್ಣದೊಂದು ತ್ಯಾಗ ಅಗತ್ಯವಿದೆ; ಸುಲಭ ಜೀವನ, ಐಷಾರಾಮಿ ಬದುಕು ಹಾಗೂ ಅತಿವೇಗದ ಹವ್ಯಾಸವನ್ನು ತ್ಯಾಗ ಮಾಡಬೇಕಾಗುತ್ತದೆ ನಾವು. ಯಾಕಾಗಬಾರದು? ಇಷ್ಟಕ್ಕು ಅವು, ತ್ಯಾಗ ಮಾಡಲಿಕ್ಕೆ ಅರ್ಹವಾದ ಸಂಗತಿಗಳೇ ಆದ್ದರಿಂದ, ತ್ಯಾಗ ಮಾಡುವುದರಲ್ಲಿ ಹಾನಿಯೇನಿದೆ? ಯಂತ್ರಗಳನ್ನು ಕಳಚುವ ಚಳುವಳಿಯು ನಮ್ಮ ಆರೋಗ್ಯ ಸುಧಾರಣೆಯ ಚಳುವಳಿಯೂ ಹೌದು. ಯಂತ್ರಗಳನ್ನು ಕಳಚಲು ಹೊರಟವರು ಗಾಂಧಿಜಿಯವರನ್ನು ನೆನೆಯದೆ ಗತ್ಯಂತರವಿಲ್ಲ. 'ಮನುಷ್ಯ ಯಂತ್ರಗಳ ಅಡಿಯಾಳಾಗುತ್ತಿದ್ದಾನೆ' ಎಂದು ಒಂದು ನೂರು ವರ್ಷಗಳ ಹಿಂದೆ ಎಚ್ಚರಿಕೆ ನೀಡಿದ್ದರು ಗಾಂಧೀಜಿ. ಮಹಾನ್ ಲೇಖಕ ಟಾಲ್‌ಸ್ಟಾಯ್ ಕೂಡ ಐಷಾರಾಮಿ ಜೀವನ ಹಾಗೂ ಯಂತ್ರ ನಾಗರೀಕತೆಯ ವಿರುದ್ಧ ಎಚ್ಚರಿಕೆ ನೀಡಿದ್ದರು. ಇನ್ನೂ ಅನೇಕರು ಎಚ್ಚರಿಕೆ ನೀಡಿದ್ದರು.

ಗಾಂಧೀಜಿಯವರನ್ನು ಇಲ್ಲಿ ನೆನೆಯಲಿಕ್ಕೆ ಮತ್ತೊಂದು ಕಾರಣವಿದೆ. ಗಾಂಧೀಜಿಯವರು ಪ್ರತಿಪಾದಿಸಿದ ಸತ್ಯಾಗ್ರಹ ತಂತ್ರವು ಯಂತ್ರಗಳನ್ನು ಕಳಚುವ ಆಂದೋಲನಕ್ಕೆ ಸೂಕ್ತವಾದ ಮಾರ್ಗವಾಗಿದೆ. ಸತ್ಯಾಗ್ರಹದ ಮೂಲ ಆಶಯವೆಂದರೆ, ನಾವು ಬದಲಾಗುವುದು ಹಾಗೂ ನಮ್ಮ ಬದಲಾವಣೆಯ ಮಾದರಿಯನ್ನು ಮುಂದಿಟ್ಟುಕೊಂಡು, ಇತರರಿಗೆ ಬದಲಾಗುವಂತೆ ಆಗ್ರಹಿಸುವುದು. ಗಾಂಧೀಜಿಯವರನ್ನು ನಾವು ನೆನೆಯ ಬೇಕಾದುದ್ದು, ಸತ್ಯಾಗ್ರಹವೆಂಬ ಅಹಿಂಸಾತ್ಮಕವಾದ ಅಸ್ತ್ರವನ್ನು ಅವರು ನೀಡಿದರು ಎಂಬ ಕಾರಣಕ್ಕಾಗಿ.

ಯಂತ್ರಗಳನ್ನು ಕಳಚುವ ಚಳುವಳಿಯೆಂದರೆ, ಇತ್ತ ವೈಯಕ್ತಿಕ ಬದುಕಿನಲ್ಲಿ ಯಂತ್ರಗಳ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳುವ ನೈತಿಕ ಚಳುವಳಿಯೂ ಹೌದು, ಅತ್ತ ಪಾರಂಪರಿಕ ಉತ್ಪಾದನಾ ಪದ್ಧತಿಗಳನ್ನು ಗಟ್ಟಿಗೊಳಿಸುವ ಆರ್ಥಿಕ ಹಾಗೂ ಸಾಮಾಜಿಕ ಚಳುವಳಿಯೂ ಹೌದು. ಅರ್ಥಾತ್, ಅಂತರಂಗ ಶುದ್ಧಿ ಹಾಗೂ ಬಹಿರಂಗ ಶುದ್ಧಿಯ ಎರಡೂ ಚಳುವಳಿಗಳೂ ಮಿಳಿತವಾಗಿವೆ, ಯಂತ್ರಗಳನ್ನು ಕಚಳುವಲ್ಲಿ. ಈ ಅರ್ಥದಲ್ಲಿ ಅದು ಆಧ್ಯಾತ್ಮಿಕ ಚಳುವಳಿಯೂ ಹೌದು.

ಯಂತ್ರ ನಾಗರೀಕತೆ ತಲುಪದ ಜಾಗವೇ ಇಲ್ಲ: ಪರಿಸರ, ನೈತಿಕತೆ, ಧರ್ಮ, ರಾಜಕಾರಣ, ಕುಟುಂಬ ವ್ಯವಸ್ಥೆ, ಹಣಕಾಸು... ಇತ್ಯಾದಿಯಾಗಿ, ಬದುಕಿನ ಎಲ್ಲ ಕ್ಷೇತ್ರಗಳನ್ನೂ ಅದು ಆವರಿಸಿಕೊಂಡಿದೆ. ಹಾಗಾಗಿ ಯಂತ್ರಗಳನ್ನು ಕಳಚುವ ಚಳುವಳಿಯೂ ಸಹ ಈ ಎಲ್ಲ ಕ್ಷೇತ್ರಗಳನ್ನೂ ಪ್ರವೇಶಿಸುವುದು, ಹಾಗು ಎಲ್ಲ ಕ್ಷೇತ್ರಗಳಲ್ಲಿ ಈಗಾಗಲೇ ನಡೆದಿರುವ ಇತ್ಯಾತ್ಮಕ ಚಳುವಳಿಗಳ ಜೊತೆ ಸಂಬಂಧ ಬೆಸೆಯುವುದು ಅಗತ್ಯವಾಗಿದೆ. ಅಥವಾ ಈ ಎಲ್ಲ ಕ್ಷೇತ್ರಗಳಲ್ಲಿ ನಡೆದಿರುವ ಚಳುವಳಿಗಳ ಸಮಗ್ರ ರೂಪವೇ ಯಂತ್ರಗಳನ್ನು ಕಳಚುವ ಚಳುವಳಿ ಎನ್ನಬಹುದಾಗಿದೆ. * * *

ಕ್ಷೀಣಿಸುತ್ತಿರುವ ಪ್ರಜಾಪ್ರಭುತ್ವ

- ಅರುಂಧತಿ ರಾಯ್

ಪ್ರಜಾಪ್ರಭುತ್ವದ ನಂತರ ಜೀವನವಿದೆಯೆ? ಅದೆಂತಹ ಜೀವನವಾಗಿರುತ್ತದೆ? ಪ್ರಜಾಪ್ರಭುತ್ವ ವ್ಯವಸ್ಥೆ ಬಗ್ಗೆ ಚರ್ಚೆಗಳು ನಡೆದಾಗೆಲ್ಲ ಅದರ ಪ್ರತಿಪಾದಕರು ಹೇಳುತ್ತಾರೆ: "ನಿಜ ಅದರಲ್ಲಿ ಲೋಪಗಳಿವೆ. ಅದು ಅಷ್ಟು ಪರಿಪೂರ್ಣವೂ ಅಲ್ಲ. ಆದರೂ ಬೇರೆ ಎಲ್ಲ ವ್ಯವಸ್ಥೆಗಳಿಗಿಂತ ಇದೇ ವಾಸಿ".

ಆದರೆ ಇಲ್ಲಿರುವ ಮೂಲಭೂತ ಪ್ರಶ್ನೆ ಯಾವುದೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ನಾವೇನು ಮಾಡಿದ್ದೇವೆ. ಅದನ್ನು ಹೇಗೆ ಪರಿವರ್ತಿಸಿದ್ದೇವೆ? ಇದನ್ನ ಬಳಸಿಕೊಂಡ ನಂತರ ಪ್ರಜಾಪ್ರಭುತ್ವಕ್ಕೆ ಏನಾಗುತ್ತದೆ? ಅದರ ಎಲ್ಲ ಅರ್ಥವನ್ನು ಹೀರಿದ ನಂತರ ಏನು ಉಳಿದಿರುತ್ತದೆ? ಅದರ ಪ್ರತಿಯೊಂದು ಅಂಗಾಂಗವೂ ಅಪಾಯಕಾರಿ ಸಂಸ್ಥೆಯಾಗಿ ಪರಿವರ್ತನೆಯಾಗಿರುವಾಗ ಏನಾಗುತ್ತದೆ? ಅದರಲ್ಲೂ ಇವತ್ತು ಪ್ರಜಾಪ್ರಭುತ್ವ ಮತ್ತು ಮುಕ್ತ ಮಾರುಕಟ್ಟೆ ಸಮ್ಮಿಲನಗೊಂಡು ಒಂದು ಪರಭಕ್ಷಕ ಜೀವಿಯಾಗಿರುವಾಗ, ಲಾಭವನ್ನು ಹೆಚ್ಚಿಸುವುದೇ ಸೀಮಿತ ಕಲ್ಪನೆಯಾಗಿರುವಾಗ ಈ ಪ್ರಕ್ರಿಯೆಯನ್ನು ಹಿಮ್ಮೊಗವಾಗಿ ತಿರುಗಿಸಬಹುದೇ? ವಿಕೃತವಾಗಿರುವ ಇದನ್ನು ಅದರ ಹಳೆ ರೂಪಕ್ಕೆ ಬದಲಾಯಿಸಬಹುದೇ?

ಈ ಪ್ರಶ್ನೆಗಳಿಗೆ ನನ್ನಲ್ಲಿ ಉತ್ತರಗಳಿಲ್ಲ, ಆದರೆ ಪ್ರಜಾಪ್ರಭುತ್ವ ಎಂಬ ಸಂಜ್ಞಾಜ್ಯೋತಿ ಕ್ಷೀಣಿಸುತ್ತಿದ್ದು ನಾವೆಲ್ಲ ಕನಸಿದ್ದ ನ್ಯಾಯ ಮತ್ತು ಸ್ಥಿರತೆಯನ್ನು ಈ ವ್ಯವಸ್ಥೆ ನೀಡಲಾರದೆಂದನಿಸುತ್ತಿವೆ.

ಜನಹತ್ಯೆಯ ಇತಿಹಾಸ ಮತ್ತು ಅದರ ನಿರಾಕರಣೆ ಒಂದಡೆಯಾದರೆ ಇನ್ನೊಂದೆಡೆ 'ಅಭಿವೃದ್ಧಿ' ಮತ್ತು 'ಜನಹತ್ಯೆ'ಯ ನಡುವೆ ಒಂದು ಆರ್ಗಾನಿಕ್ ಸಂಬಂಧ ಏರ್ಪಟ್ಟಿದೆ. ಹಾಗೆಯೆ ಇವತ್ತು 'ಪ್ರಗತಿ' ಮತ್ತು 'ಅಭಿವೃದ್ಧಿ' ಎಂಬ ಪದಗಳ ಬದಲಾಗಿ ಆರ್ಥಿಕ 'ಸುಧಾರಣೆ', 'ಅನಿಯಂತ್ರಣ' ಮತ್ತು 'ಖಾಸಗೀಕರಣ' ಎಂಬ ಪದಗಳನ್ನು ಬಳಸಲಾಗುತ್ತಿದೆ. 'ಸ್ವಾತಂತ್ರ್ಯ' ಎಂಬ ಪದ ಕೂಡ ಮನುಷ್ಯನ ಆಶಯಗಳನ್ನು ಬಿಂಬಿಸುವ ಬದಲಾಗಿ ವಿವಿಧ ಸುಗಂಧ ಬ್ರ್ಯಾಂಡ್‌ಗಳ ನಡುವಿನ 'ಆಯ್ಕೆ'ಗೆ ಸೀಮಿತವಾಗುತ್ತಿದೆ. ಮಾರುಕಟ್ಟೆ ಕೂಡ ನೀವು ಅಗತ್ಯ ವಸ್ತುಗಳನ್ನು ಖರೀದಿಸುವ ಜಾಗವಾಗಿಲ್ಲ. ಬದಲಾಗಿ ಮುಖರಹಿತ ಕಾರ್ಪೋರೇಟ್ ಕಂಪನಿಗಳು 'ಭವಿಷ್ಯಗಳನ್ನು' ಖರೀದಿ–ಮಾರಾಟ ಮಾಡುವ ಜಾಗವಾಗಿದೆ. 'ನ್ಯಾಯ' ಕೂಡ ಕನಿಷ್ಠ 'ಮಾನವ ಹಕ್ಕು'ಗಳಾಗಿ ಬಿಟ್ಟಿದೆ. ಭಾಷೆಯ ಕಳವು, ಪದಗಳಿಗೆ ಹೊಸ ಅರ್ಥಗಳು– ಇವೆಲ್ಲವೂ ಈಗ ಅಸ್ತ್ರಗಳಾಗಿವೆ; ಅವುಗಳ ನಿಜವಾದ ಉದ್ದೇಶಗಳನ್ನು ನೀಡುತ್ತಿದ್ದ ಅರ್ಥಗಳನ್ನೇ ಈಗ ಅದಲುಬದಲು ಮಾಡಲಾಗಿದೆ. ಇದೇ ಹೊಸ ಕಾರುಬಾರಿನ ತ್ಸಾರ್‌ಗಳ ಸಾಧನೆ. ಹಾಗೆ ಮಾಡುವ ಮೂಲಕ ಅವರ ವಿರೋಧಿಗಳನ್ನು ಮೂಲೆಗುಂಪು ಮಾಡಿದ್ದಾರಲ್ಲದೆ, ತಮ್ಮ ವಿರೋಧವನ್ನು ವ್ಯಕ್ತಪಡಿಸಲು ಪದಗಳೇ

ಇಲ್ಲದಂತೆ ಮಾಡಿದ್ದಾರೆ. ಈ ಕಾರಣಕ್ಕಾಗಿಯೇ ಅವರು ತಮ್ಮ ಟೀಕಾಕಾರನ್ನು 'ಪ್ರಗತಿ ವಿರೋಧಿಗಳು', 'ಅಭಿವೃದ್ಧಿಯ ವಿರೋಧಿಗಳು', 'ಸುಧಾರಣೆ ವಿರೋಧಿಗಳು', ಮತ್ತು ಮುಖ್ಯವಾಗಿ 'ದೇಶದ್ರೋಹಿಗಳು' ಎಂದು ಹಂಗಿಸುತ್ತಾರೆ. ಅರಣ್ಯಗಳ ಉಳಿವಿನ ಬಗ್ಗೆ ಅಥವಾ ನದಿಯೊಂದನ್ನು ಕಾಪಾಡುವ ಬಗ್ಗೆ ಯಾರಾದರೂ ಮಾತಾಡಿದರೆ "ನಿಮಗೆ ಅಭಿವೃದ್ಧಿಯಲ್ಲಿ ನಂಬಿಕೆ ಇಲ್ಲವೆ" ಎಂದು ಕೇಳಿತ್ತಾರೆ. ದೊಡ್ಡ ಅಣೆಗಳಿಂದ ತಮ್ಮ ನೆಲ ಮತ್ತು ಬದುಕನ್ನೆ ಕಳೆದುಕೊಳ್ಳುವವರಿಗೆ "ನಿಮ್ಮಲ್ಲಿ ಬೇರೆ ರೀತಿಯ ಅಭಿವೃದ್ಧಿಯ ಮಾದರಿ ಇದೆಯೇ" ಎನ್ನುತ್ತಾರೆ. ಎಲ್ಲರಿಗೂ ಶಿಕ್ಷಣ, ಆರೋಗ್ಯ ವ್ಯವಸ್ಥೆ ಮತ್ತು ಸಾಮಾಜಿಕ ರಕ್ಷಣೆ ಕೊಡಬೇಕಿರುವುದು ಸರ್ಕಾರದ ಕರ್ತವ್ಯ ಎಂದರೆ "ನೀವು ಮಾರುಕಟ್ಟೆ ವಿರೋಧಿಗಳು" ಎನ್ನುತ್ತಾರೆ. ಇನ್ನು ಬಡವರಿಗಂತೂ ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬುದೇ ಇವತ್ತಿನ ಯುಗದಲ್ಲಿ ತುಂಬಾ ದುಬಾರಿಯಾಗಿದೆ.

ಕಳೆದ ಎರಡು ದಶಕಗಳ ಇಂತಹ ಅಭಿವೃದ್ಧಿಯಿಂದಾಗಿ ಭಾರತದಲ್ಲಿ ಒಂದು ದೊಡ್ಡ ಮಧ್ಯಮ ವರ್ಗವೇ ಸೃಷ್ಟಿಯಾಗಿದೆ. ಇದ್ದಕ್ಕಿದ್ದಂತೆ ಬಂದಿರುವ ಐಶ್ವರ್ಯ ಮತ್ತು ಅದರೊಂದಿಗಿನ ಮರ್ಯಾದೆಯ ಅಮಲಿನಲ್ಲಿ ಮಧ್ಯಮ ವರ್ಗ ತೇಲಾಡುತ್ತಿದೆ. ಆದರೆ ಇದೇ ಪ್ರಕ್ರಿಯೆಯಲ್ಲಿ ಅವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಹತಾಶ ಕೆಳವರ್ಗವೂ ಸೃಷ್ಟಿಯಾಗಿದೆ. ವಿವೇಚನಾರಹಿತ ಪರಿಸರದ ದೋಚುವಿಕೆ, ಬೃಹತ್ ಕಟ್ಟಡಗಳ ಮತ್ತು ಅಣೆಕಟ್ಟುಗಳ ನಿರ್ಮಾಣ, ಗಣಿಗಾರಿಕೆ ಮತ್ತು ವಿಶೇಷ ಆರ್ಥಿಕ ವಲಯಗಳಿಂದಾಗಿ ಲಕ್ಷಾಂತರ ಜನರ ಭೂಮಿಯನ್ನು ಕಸಿದುಕೊಳ್ಳಲಾಗಿದೆಯಲ್ಲದೆ ಅವರನ್ನೆಲ್ಲ ನಿರಾಶ್ರಿತರನ್ನಾಗಿಸಿದೆ. ಇವೆಲ್ಲ 'ಅಭಿವೃದ್ಧಿ' ಕಾರ್ಯಗಳು ನಡೆದಿರುವುದು ಬಡವರ ಹೆಸರಿನಲ್ಲಾದರೂ ಅವುಗಳ ನಿಜವಾದ ಫಲಾನುಭವಿಗಳು ನವಕುಲೀನ ವರ್ಗ.

ಅಭಿವೃದ್ಧಿ ಕುರಿತ ವಾದವಿವಾದಗಳ ಕೇಂದ್ರಬಿಂದುವೇ ಭೂಮಿಗಾಗಿನ ಈ ಕಾಳಗ. ದೇಶದ ಆರ್ಥಿಕ ಸಚಿವರಾಗುವ ಮುನ್ನ ಪಿ.ಚಿದಂಬರಂ ಎನ್ರಾನ್ ಕಂಪನಿಯ ವಕೀಲರಾಗಿದ್ದರು ಮತ್ತು ಅಂತರರಾಷ್ಟ್ರೀಯ ಗಣಿಗಾರಿಕಾ ಕಂಪನಿಯಾದ ವೇದಾಂತದ ಅಧ್ಯಕ್ಷೀಯ ಮಂಡಳಿಯ ಸದಸ್ಯರಾಗಿದ್ದರು. ಒರಿಸ್ಸಾದ ನಿಯಾಂಗಿರಿ ಬೆಟ್ಟಗಳನ್ನು ಇವತ್ತು ನಾಶಪಡಿಸುತ್ತಿರುವ ಕಂಪನಿಯೇ ಈ ವೇದಾಂತ. ಸಂದರ್ಶನವೊಂದರಲ್ಲಿ ಚಿದಂಬರಂ ಅವರು ದೇಶದ ಶೇ.೮೫ ಜನ ನಗರ ನಿವಾಸಿಗಳಾಗುವಂತೆ ಮಾಡುವುದೇ ತಮ್ಮ ಯೋಜನೆ ಎಂದು ಹೇಳಿದ್ದರು. ಇದನ್ನು ಕಾರ್ಯರೂಪಕ್ಕೆ ತರಬೇಕಾದರೆ ಕಲ್ಪಿಸಿಕೊಳ್ಳಲೂ ಅಸಾಧ್ಯವಾದ ಪ್ರಮಾಣದಲ್ಲಿ ಸಾಮಾಜಿಕ ಇಂಜಿನಿಯರಿಂಗ್ ಮಾಡಬೇಕಾಗಿತ್ತದೆ. ಅಂದರೆ ಸುಮಾರು ಐನೂರು ಮಿಲಿಯನ್ ಜನ ತಮ್ಮ ಗ್ರಾಮಗಳನ್ನು ತೊರೆದು ನಗರಗಳನ್ನು ಸೇರುವಂತೆ ಅವರನ್ನು ಪುಸಲಾಯಿಸಬೇಕಾಗುತ್ತದೆ ಅಥವಾ ಬಲವಂತ ಮಾಡಬೇಕಾಗುತ್ತದೆ. ಅದಕ್ಕೆಲ್ಲ ಈಗಾಗಲೇ ಚಾಲನೆ ದೊರೆತಿದ್ದು ಭಾರತವನ್ನು ವೇಗವಾಗಿ ಪೋಲೀಸ್ ರಾಜ್ಯವಾಗಿ ಪರಿವರ್ತಿಸಲಾಗುತ್ತಿದೆ. ಈ ಪೋಲೀಸ್ ರಾಜ್ಯದಲ್ಲಿ ತಮ್ಮ ಭೂಮಿಯನ್ನು ಬಿಟ್ಟುಕೊಡಲು ನಿರಾಕರಿಸುವ ಜನರಿಗೆ ಬಂದೂಕು ತೋರಿಸಲಾಗುತ್ತಿದೆ. ಈ ಸಾಧನೆಗೇ ಇರಬೇಕು ಚಿದಂಬರಮ್ ಅವರು ಆರ್ಥಿಕ ಸಚಿವ ಸ್ಥಾನದಿಂದ ಗೃಹ ಸಚಿವ ಸ್ಥಾನಕ್ಕೆ

ಹೆಚ್ಚು ಖರ್ಚು ಮಾಡಬಲ್ಲವರಾಗಿದ್ದಾರೆ. ಆದರೆ ಅವರು ಪ್ರತಿನಿಧಿಸುವ ಜನರು ದಿನವೊಂದಕ್ಕೆ ಇಪ್ಪತ್ತು ರುಪಾಯಿಗಳನ್ನು ಖರ್ಚುಮಾಡಲೂ ಅಸಮರ್ಥರಾಗಿದ್ದಾರೆ. ಈ ನಗ್ನ ಸತ್ಯ ಕುರಿತು ಪ್ರತಿನಿಧಿಗಳು ಆಲೋಚಿಲು ಅಸಮರ್ಥರಾಗಿದ್ದಾರೆ, ನಮ್ಮ ಅರ್ಥ ವ್ಯವಸ್ಥೆಯ ಇನ್ನೊಂದು ವಿಕಟ ಪರಿಸ್ಥಿತಿ ಏನೆಂದರೆ ನಮ್ಮ ರಾಷ್ಟ್ರೀಕೃತ ಬ್ಯಾಂಕುಗಳೆಲ್ಲವೂ ಕೋಟ್ಯಂತರ ರುಪಾಯಿ ಲಾಭ ಗಳಿಸುತ್ತವೆ. ವಿಜಯಾ ಬ್ಯಾಂಕ್ ಜೂನ್ ಮೂವತ್ತರ ಅಂತ್ಯದಲ್ಲಿ ನೂರಾನಲವತ್ತಮೂರು ಕೋಟಿ ನಿವ್ವಳ ಲಾಭ ಗಳಿಸಿದರೆ, ಕೆನರಾ ಬ್ಯಾಂಕ್ ಐನೂರಐವತ್ತೈದು ಕೋಟಿ ಗಳಿಸಿದರೆ, ಕಾರ್ಪೋರೇಷನ್ ಬ್ಯಾಂಕ್ ಎಂಟುನೂರತೊಂಭತ್ತೆರಡು ಕೋಟಿ ಲಾಭಗಳಿಸಿದೆ. ಇದೇ ರೀತಿ ಉಳಿದ ಬ್ಯಾಂಕುಗಳು ಸಹ ಕೋಟ್ಯಂತರ ರುಪಾಯಿ ಲಾಭ ಗಳಿಸಿವೆ. ದೇಶದಲ್ಲಿ ಬಡತನ, ನಿರುದ್ಯೋಗ, ಅತಿವೃಷ್ಟಿ, ಅನಾವೃಷ್ಟಿ, ನಿರಕ್ಷರತೆ ಇತ್ಯಾದಿ ಸಮಸ್ಯೆಗಳಿರುವಾಗ ನಮ್ಮೀ ಬ್ಯಾಂಕುಗಳಿಗೆ ಇಷ್ಟು ಲಾಭವನ್ನು ಯಾವ ರೀತಿ ಮಾಡಲು ಸಾಧ್ಯವಾಯಿತು ಎಂಬುದು ಅರ್ಥವಾಗದ ವಿಷಯವಾಗಿದೆ. ಬಡವರು ಕಷ್ಟಪಟ್ಟು ಈ ಬ್ಯಾಂಕುಗಳಲ್ಲಿ ಇಟ್ಟಿರುವ ಠೇವಣಿಗಳ ಮೇಲಿನ ಬಡ್ಡಿಯನ್ನು ಕಡಿಮೆ ಮಾಡುತ್ತಲೇ ಇರುತ್ತವೆ. ಕೋಟ್ಯಂತರ ರುಪಾಯಿಗಳ ಲಾಭವಾಗಿದ್ದರೆ ನಿಗದಿತ ಅವಧಿಯ ಠೇವಣಿಗಳ ಮೇಲಿನ ಬಡ್ಡಿಯನ್ನು ಏಕೆ ಹೆಚ್ಚಿಸುತ್ತಿಲ್ಲ? ಈ ಪ್ರಶ್ನೆಯನ್ನು ಯಾರೂ ಕೇಳುವವರಿಲ್ಲವಾಗಿದೆ.

ಇನ್ನು ಕೇಂದ್ರ ಸರ್ಕಾರ ಹೊಸ ಯೋಜನೆಯನ್ನು ಹಾಕಿಕೊಂಡಿದೆ. ದೇಶದ ನೂರಾಐವತ್ತು ಕೋಟಿಯಲ್ಲಿಯ ಪ್ರತಿಯೊಬ್ಬ ಪ್ರಜೆಗೂ ಗುರುತಿನ ಚೀಟಿ ಕೊಡುವ ಯೋಜನೆ. ಈ ಯೋಜನೆ ಎರಡು ಸಾವಿರದ ಹನ್ನೊಂದರ ವೇಳೆಗೆ ಮುಗಿಯಬೇಕಿದೆ. ಈ ಯೋಜನೆ ಕಾರ್ಯಗತಗೊಳ್ಳಬೇಕಾದರೆ ಒಂದು ಲಕ್ಷದ ಐವತ್ತು ಸಾವಿರ ಕೋಟಿ ಖರ್ಚಾಗಲಿದೆ. ಅಲ್ಲದೆ ಈ ಯೊಜನೆ ಕಾರ್ಯಗತಗೊಳ್ಳುವಾಗಲೂ, ಕಾರ್ಯಗತಗೊಂಡ ನಂತರವೂ ಅನೇಕ ಸಮಸ್ಯೆಗಳನ್ನು ತಂದೊಡ್ಡುವ ಸಂಭವವಿದೆ. ಈ ಯೋಜನೆಯ ಸಾಧಕ-ಬಾಧಕಗಳ ಬಗ್ಗೆ ಸಮಗ್ರ ಚರ್ಚೆ ನಡೆದಿಲ್ಲವಾದರೂ ಈ ಯೋಜನೆಯ ಕೆಲಸ ಪ್ರಾರಂಭವಾಗಿಯೇ ಬಿಟ್ಟಿದೆ! ಈ ಯೋಜನೆಯ ಅಗತ್ಯ ಏಕೆ ಉಂಟಾಯಿತು? ದೇಶದ ಪ್ರಜೆಗಳು ನಂಬಿಕೆಗೆ ಅರ್ಹರಾಗಿಲ್ಲವೋ? ನಂಬಿಕೆಗೆ ಅರ್ಹವಾಗಿಲ್ಲವೆಂದರೆ ಇದುವರೆಗಿನ ಆಡಳಿತ, ಯೋಜನೆಗಳು, ಶಿಕ್ಷಣ, ರಾಜನೀತಿಯೆಲ್ಲವೂ ವ್ಯರ್ಥವಾಗಿರುವಂತೆಯೇ ಎಂದು ಭಾವಿಸುವುದಕ್ಕೆ ಅವಕಾಶವಾಗಿದೆ. ಇನ್ನು ನನ್ನ ತಲೆಯ ಮೇಲೆ ಇಡಲಾಗಿರುವ ಪ್ರಜಾತಂತ್ರ್ಯವೆಂಬ ಕಿರೀಟ ಚುನಾವಣೆಗಳ ಕಾರಣದಿಂದಾಗಿ ಮುಳ್ಳಿನ ಕಿರೀಟವಾಗಿದೆ. ಜಗತ್ತಿನಲ್ಲಿಯೇ ಬಹುದೊಡ್ಡ ಪ್ರಜಾತಂತ್ರ್ಯವುಳ್ಳ ದೇಶವೆಂದು ನನ್ನನ್ನು ಹೊಗಳುತ್ತಾ ನನ್ನ ಮಕ್ಕಳು ನನ್ನನ್ನು ಹೊನ್ನ ಶೂಲಕ್ಕೆ ನೇಣುಹಾಕುತ್ತಿದ್ದಾರೆ. ಭರತಮಾತೆಯ ಈ ಎಲ್ಲ ಗೋಳನ್ನು ಕೇಳಿಸಿಕೊಳ್ಳುತ್ತಿರುವ ಈ ದೇಶದ ಬಡರೈತ ಕಂಗಾಲಾಗಿ ನನ್ನನ್ನು ಕೇಳುತ್ತಿದ್ದಾನೆ, "ಓ ಭಾರತ ಮಾತೆಯೇ ನಿನ್ನ ಪಯಣ ಯಾವ ದಿಕ್ಕಿಗೆ?"

* * *

ಸನ್ಮಾನ್ಯರಿಂದ...

ದಯಮಾಡಿ ನನಗೆ ಪ್ರತಿ ತಿಂಗಳು ಜನಪದ ವಿಚಾರದ ಆರು ಪ್ರತಿಗಳನ್ನು ಕಳುಹಿಸಿಕೊಡಿ. ನಾನು ನನ್ನ ಇಷ್ಟ ಮಿತ್ರರಿಗೆ ಪತ್ರಿಕೆಯನ್ನು ಕೊಟ್ಟು ಅವರು ಚಂದದಾರಗುವಂತೆ ಪ್ರಯತ್ನಿಸುವೆ. ನನ್ನ ಸ್ನೇಹಿತರು ಪತ್ರಿಕೆಯನ್ನು ಇಷ್ಟಪಟ್ಟಿದ್ದಾರೆ.

– **ಗಣೇಶ್**, ಉಪಾಧ್ಯಾಯರು,
ಸದ್ವಿದ್ಯಾ ವಿದ್ಯಾಸಂಸ್ಥೆ, ಮೈಸೂರು

ಜನಪದ ವಿಚಾರ ತಲುಪಿತು. ಜನಪದ ನಿಲಯದ ಅಂತರಂಗದಲ್ಲಿಯ ವಿಷಯಗಳನ್ನು ತಿಳಿದು ಸಂತೋಷವಾಯಿತು. ಟ್ರಸ್ಟಿಗೆ ಭೇಟಿಕೊಟ್ಟು ಬಹಳ ಕಾಲವಾಯಿತು. ಅಲ್ಲಿಗೆ ಬರಬೇಕೆಂದು ಬಯಸಿದ್ದೇನೆ. ಪತ್ರಿಕೆಯನ್ನು ಕಳುಹಿಸುತ್ತಾಯಿರಿ.

– **ಟಿ.ಆರ್.ಗಾಯಕ್‌ವಾಡ್**, ಬೆಂಗಳೂರು

ಜನಪದ ವಿಚಾರದಲ್ಲಿ ಒಳ್ಳೆಯ ಲೇಖನಗಳಿರುತ್ತವೆ. ಓದಿ ಸಂತೋಷವಾಗುತ್ತದೆ.

– **ಕೆ.ಪ್ರಹ್ಲಾದರಾವ್**, ಮಂಡ್ಯ

ನನ್ನ ಅತ್ತೆಯವರು ಜನಪದ ವಿಚಾರದ ಅಭಿಮಾನಿಯಾಗಿದ್ದಾರೆ. ಅದನ್ನು ತಪ್ಪದೇ ಪ್ರತಿ ತಿಂಗಳು ಓದುತ್ತಾರೆ.

– **ಬಸವರಾಜ್**, ಮೈಸೂರು

ಉತ್ತಮ ವ್ಯಕ್ತಿತ್ವದ ಪೈಗಳನ್ನು ಅವರ ಸಿದ್ಧಾಂತಗಳಿಗನುಗುಣವಾಗಿರುವ ನಿಮ್ಮ ಪತ್ರಿಕೆಯಲ್ಲಿ ಪರಿಚಯಿಸಿ ನನ್ನ ನೆನಪನ್ನು ಹಸಿರಾಗಿಸಿದ್ದಕ್ಕೆ ನಿಮಗೂ ಡಾ॥ ಜ್ಯೋತ್ಸ್ನಾ ಕಾಮತ್‌ರವರಿಗೂ ಹೃತ್ಪೂರ್ವಕ ಅಭಿನಂದನೆಗಳು.

– **ಆರೂರು ಮಂಜುನಾಥರಾವ್**, ಆರೂರು

ಜುಲೈ ೯ರ ತಿಂಗಳ "ಜನಪದ ವಿಚಾರ"ದಲ್ಲಿ "ಶಿಕ್ಷಣದ ಖಾಸಗೀಕರಣ"ದ ಬಗ್ಗೆ ಬರೆದಿರುವ ಲೇಖನ ಅತ್ಯುತ್ತಮವಾಗಿದೆ ಮತ್ತು ಸರ್ಕಾರಕ್ಕೆ ಮಾರ್ಗದರ್ಶಕವಾಗಿದೆ.

– **ಎಸ್.ಶಂಕರಪ್ಪ**,
ನಿವೃತ್ತ ಉಪನ್ಯಾಸಕ, ಮೈಸೂರು

ಬೀಳುವುದರ ಪ್ರಾಮುಖ್ಯತೆ ಅರಿತ ಆ ಕಂಪನಿಗಳು ಬಾಲಿವುಡ್‌ನ ಸ್ಟಾರ್‌ಗಳನ್ನು ಉಪಯೋಗಿಸಿಕೊಂಡು ಎಲ್ಲರೂ ಮತ ಚಲಾಯಿಸಬೇಕೆಂಬ ಜಾಹೀರಾತು ಆಂದೋಲನವನ್ನು ಟಿವಿ ಮತ್ತು ಪತ್ರಿಕೆಗಳಲ್ಲಿ ನಡೆಸಿದವು.

ದೆಹಲಿಯ ಪ್ರತಿಷ್ಠಿತ ಖಾನ್ ಮಾರ್ಕೆಟಿನಲ್ಲಿ ಕೆಲ ಅಂಗಡಿ ಮತ್ತು ಹೋಟೆಲ್‌ಗಳು ಮತ ಚಲಾಯಿಸಿದ ಗುರುತನ್ನು ತೋರಿಸಿದರೆ ವಿಶೇಷ ರಿಯಾಯಿತಿಗಳನ್ನು ನೀಡಿದವು. ಇಂತಹ ತರ್ಕಗಳಿಂದಾಗಿ ಪ್ರಜಾಪ್ರಭುತ್ವ ಎಂಬುದೇ ಒಂದು ಫ್ಯಾಷನ್ ಆಯಿತು. ಅದು ಹೇಗೆ ಎಂದರೆ: ಚೈನಾದಲ್ಲಿ ಕ್ರೀಡೆಗೆ ಪ್ರಾಮುಖ್ಯತೆ ಇರುವುದರಿಂದ ಅವರು ಒಲಂಪಿಕ್ಸ್ ಅನ್ನು ಆಯೋಜಿಸಿದರು. ಹಾಗೆಯೇ ಇಲ್ಲಿ ಪ್ರಜಾಪ್ರಭುತ್ವ ಇರುವುದರಿಂದ ಇಲ್ಲಿ ಚುನಾವಣೆಗಳನ್ನು ಆಯೋಜಿಸಲಾಗಿದೆ. ಈ ಎರಡರ ಹಿಂದೆ ಅಪಾರ ಬಂಡವಾಳ ಹೂಡಿದ ಪ್ರಾಯೋಜಕರಿದ್ದು ಎರಡೂ ಟಿವಿ ಪರದೆಗಳ ಮೇಲೆ ವೀಕ್ಷಿಸುವ ಪ್ರೇಕ್ಷಕ ಸ್ನೇಹಿ ಕ್ರೀಡೆಗಳಾದವು.

ಭಾರತದ ಚುನಾವಣೆಯನ್ನು ವೀಕ್ಷಿಸಿ ವರದಿ ಮಾಡಲು ಬಿಬಿಸಿ ಸಂಸ್ಥೆ ಒಂದು ರೈಲುಬೋಗಿಯನ್ನೇ ಮೀಸಲಿಟ್ಟಿತ್ತು. ಆ ರೈಲು ಬೋಗಿಯ ಹೊರಗಡೆ ಒಂದು ಘೋಷಣೆಯನ್ನು ಪ್ರಕಟಿಸಲಾಗಿತ್ತು. ಅಮೆರಿಕದ ಮಾಜಿ ಅಧ್ಯಕ್ಷ ಬೆನ್ ಫ್ರಾಂಕ್ಲಿನ್‌ನ ಛಾಯಾಚಿತ್ರವನ್ನು ಹೊಂದಿರುವ ನೂರು ಡಾಲರ್ ನೋಟು ನಿಧಾನವಾಗಿ ಗಾಂಧಿಯ ಭಾವಚಿತ್ರವನ್ನು ಹೊಂದಿರುವ ಐನೂರು ರೂಪಾಯಿ ನೋಟಿಗೆ ಪರಿವರ್ತನೆಗೊಳ್ಳುತ್ತಿರುವ ಚಿತ್ರದೊಂದಿಗೆ ಪ್ರಕಟಿಸಲಾಗಿದ್ದ ಆ ಘೋಷಣೆ ಹೀಗಿತ್ತು: "ಭಾರತೀಯ ವೋಟುಗಳು ಜಗತ್ತಿನ ನೋಟುಗಳನ್ನು ರಕ್ಷಿಸುತ್ತವೆಯೇ?" ಹೀಗೆ ನಾಚಿಕೇಡಿತನ ಮತ್ತು ಮುಜುಗರವಿಲ್ಲದ ರೀತಿಯಲ್ಲಿ ಭಾರತದ ಮತಗಳನ್ನು ಒಂದು ಮಾರುಕಟ್ಟೆಯಾಗಿ, ಮತದಾರರನ್ನು ಗ್ರಾಹಕರನ್ನಾಗಿ, ಪ್ರಜಾಪ್ರಭುತ್ವವನ್ನು ಮುಕ್ತ ಮಾರುಕಟ್ಟೆಯನ್ನಾಗಿ ಪರಿವರ್ತಿಸಲಾಯಿತು. ಆದ್ದರಿಂದ: ಈ ವ್ಯವಸ್ಥೆಯಲ್ಲಿ ಗ್ರಾಹಕರಾಗದವರು ಲೆಕ್ಕಕ್ಕೆ ಇಲ್ಲ.

ತನ್ನ ಆರ್ಥಿಕ ನೀತಿಗಳಿಂದಾಗಿರುವ ಅನಾಹುತಗಳನ್ನು ತಗ್ಗಿಸಲು ಕಳೆದ ಬಾರಿ ಕಾಂಗ್ರೆಸ್ ಪಕ್ಷ ಮೂರು ಕಾನೂನುಗಳನ್ನು ಜಾರಿಗೊಳಿಸಿತು. ಅವುಗಳಲ್ಲಿ ಮುಖ್ಯವಾದದ್ದು NREGA. ಇದರ ಪ್ರಕಾರ ಪ್ರತಿ ಗ್ರಾಮೀಣವಾಸಿ ಬಡ ಸಂಸಾರಕ್ಕೆ ಕನಿಷ್ಠ ವೇತನದಲ್ಲಿ ಪ್ರತಿ ವರ್ಷ ನೂರು ದಿನಗಳ ಕೂಲಿ ನೀಡಲಾಗುತ್ತದೆ. ಅದರಂತೆ ವರ್ಷಕ್ಕೆ ಸುಮಾರು ೮೦೦೦ ರೂಪಾಯಿಗಳನ್ನು ಪ್ರತಿ ಸಂಸಾರ ಪಡೆಯಬಹುದು. (ಇಷ್ಟು ಹಣವನ್ನು ಸಾಹುಕಾರರು ಹೋಟೆಲ್ಲಿನ ಒಂದು ಊಟಕ್ಕೆ ವೆಚ್ಚ ಮಾಡುತ್ತಾರೆ). ಹಾಗೆ ನೋಡಿದಾಗ, ಈ ಹಣ ಸಾಹುಕಾರರ ಊಟದ ಮೇಜಿನಿಂದ ಉದುರಿದ ತುಣುಕಗಳಂತೆ ಭಾಸವಾಗುತ್ತದೆ. ಆದರೆ ಅಭಿವೃದ್ಧಿಯ ಹೆಸರಿನಲ್ಲಿ ತಮ್ಮ ಭೂಮಿ ಮತ್ತು ಬದುಕನ್ನೇ ಕಳೆದುಕೊಂಡಿರುವ ಜನ ಅಂತಹ ತುಣುಕುಗಳನ್ನೇ ಅವಲಂಬಿಸಿದ್ದಾರೆಂದರೆ ಅವರ ಬದುಕು ಎಷ್ಟು ನರಕಸದೃಶ್ಯವಾಗಿರಬಹುದೆಂದು ಊಹಿಸಿ, ಅಂದಹಾಗೆ ಮೇಜಿನ ಮೇಲಿಂದ ಉದುರಿದ ಈ ತುಣುಕುಗಳ ವಿರುದ್ಧ ಚಕಾರವೆತ್ತಲು ನಮ್ಮಲ್ಲಿ ಯಾರಿಗಾದರೂ ಮನಸ್ಸಾಗಲಿ, ಹಕ್ಕಾಗಲಿ ಇದೆಯೇ? ಏನೂ ಇಲ್ಲದಿರುವವರಿಗೆ ಈ ತುಣುಕುಗಳಾದರೂ ಸಿಗಲಿ ಎಂಬ ನಿಲುವು ಚುನಾವಣೆಗಳೇ

ಇಲ್ಲದಂತಹ ಪರಿಸ್ಥಿತಿಗಿಂತ ಅರ್ಥಹೀನ ಚುನಾವಣೆಗಳಾದರೂ ವಾಸಿ ಎಂಬ ನಿಲುವಿಗೆ ಸಮಾನವಲ್ಲವೇ? NREGAಯಿಂದ ಸಿಗುವ ತುಣುಕುಗಳಾದರೂ ಬಡಬಗ್ಗರಿಗೆ ಸಿಗಲೆಂದು ನೋಡಿಕೊಳ್ಳುವುದರಲ್ಲೇ ಹಲವಾರು ಸಾಮಾಜಿಕ ಸಂಘಟನೆಗಳ ಸಮಯ ವ್ಯರ್ಥವಾಗಿದೆ. ಎಷ್ಟರಮಟ್ಟಿಗೆಂದರೆ ಭ್ರಷ್ಟ ಅಧಿಕಾರಿಗಳು ಮತ್ತು ದಳ್ಳಾಳಿಗಳು ಮಧ್ಯಸ್ಥಿಕೆ ವಹಿಸಿವುದರಿಂದ ಹೊಡೆತ ಮತ್ತು ಜೀವ ಬೆದರಿಕೆಗಳನ್ನು ಎದುರಿಸಿದ್ದಾರೆ. ಜಾರ್ಖಂಡದ ಓರ್ವ ಸಮಾಜ ಸೇವಕ ಇದೆಲ್ಲದರ ವಿರುದ್ಧ ಕೋಪ ಮತ್ತು ನಿಸ್ಸಹಾಯಕತೆಯಿಂದ ತನ್ನ ದೇಹಕ್ಕೆ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡ.

ವಿಪರ್ಯಾಸದ ಸಂಗತಿ ಯಾವುದೆಂದರೆ ಯಾವ NREGA ಕಾನೂನು ಎಡಪಕ್ಷಗಳ ಮತ್ತು ಸೋನಿಯಾ ಗಾಂಧಿಯವರ ಮುತುವರ್ಜಿಯಿಂದ ಜಾರಿಗೆ ಬಂದಿತ್ತೋ, ಅದೇ ಕಾನೂನು ಆ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತಂದಿದ್ದರೂ ಈಗ ಕಾರ್ಪೊರೇರೇಟ್ ಕಂಪನಿಗಳು ಈ ಜಯುವನ್ನು ತಮ್ಮದು ಎಂದು ಬಣ್ಣಿಸುತ್ತಿರುವುದು.

ಅದಕ್ಕಿಂತಲೂ ಮುಖ್ಯ ವ್ಯಂಗ್ಯ ಇನ್ನೊಂದಿದೆ: ಎಲ್ಲ ಚುನಾವಣಾ ರಾಜಕೀಯ ಪಕ್ಷಗಳಂತೆ ಕುತಂತ್ರವನ್ನು ಮೈಗೂಡಿಸಿಕೊಂಡಿರುವ ಎಡಪಕ್ಷಗಳು ಕೂಡ ಬಲ ಪಂಥೀಯವಾದದತ್ತ ತಿರುಗಿದ್ದು. ಕೇಂದ್ರದ ಆರ್ಥಿಕ ನೀತಿಗಳನ್ನು ಟೀಕಿಸುತ್ತಲೇ ಅದೇ ನೀತಿಗಳನ್ನು ತನ್ನ ನೆಲವಾದ ಪಶ್ಚಿಮ ಬಂಗಾಳದಲ್ಲಿ ಜಾರಿಗೆ ತರಲೆತ್ನಿಸಿದವು. ನಂದಿಗ್ರಾಮದಲ್ಲಿ ಒಂದು ಕೆಮಿಕಲ್ ಕೇಂದ್ರವನ್ನು ಸಿಂಗೂರಿನಲ್ಲಿ ಟಾಟಾ ಫ್ಯಾಕ್ಟರಿಯನ್ನು, ಲಾಲ್‌ಗಢದಲ್ಲಿ ಜಿಂದಾಲ್‌ಉಕ್ಕು ಕಾರ್ಖಾನೆಯನ್ನು ಸ್ಥಾಪಿಸಲಾಗುವುದೆಂದು ಘೋಷಿಸಿತು. ಅದರಂತೆ ಬಂದೂಕುಗಳನ್ನು ತೋರಿಸಿ ಫಲವತ್ತಾದ ಭೂಮಿಯನ್ನು ವಶಪಡಿಸಿಕೊಳ್ಳಲು ಯತ್ನಿಸಿತು. ಅದನ್ನು ಪ್ರತಿಭಟಿಸಿ ಹುಟ್ಟಿದ ಬೃಹತ್ ಜನಹೋರಾಟಗಳನ್ನು ಬುಲೆಟ್ ಮತ್ತು ಲಾಠಿಗಳ ಮೂಲಕ ಸದೆಬಡಿಯಲೆತ್ನಿಸಿತು. ಪಕ್ಷದ ಪುಂಡರು ಪ್ರತಿಭಟನಾಕಾರರ ಮೇಲೆ ದಾಳಿಗಳನ್ನು ಮಾಡಿದರಲ್ಲದೆ ಮಹಿಳೆಯರ ಮೇಲೆ ಅತ್ಯಾಚಾರವೆಸಗಿದರು. ಅಮಾಯಕರನ್ನ ಕೊಂದರು. ಆದರೆ ಕೊನೆಗೆ ನೈಜವಾದ ಜನ ಹೋರಾಟ ಮತ್ತು ಉಗ್ರಗಾಮಿ ನಿಲುವು ಗೆದ್ದಿತು. ಜನಭಿಪ್ರಾಯ ಮೇಲುಗೈ ಸಾಧಿಸಿತು. ಎಲ್ಲ ಮೂರು ಯುದ್ಧಗಳನ್ನು ಜನತೆ ಗೆದ್ದು ಸರ್ಕಾರ ಹಿಂದೆ ಸರಿಯುವಂತೆ ಮಾಡಿತು. ಫ್ಯಾಸಿಸಂನ ಪ್ರಯೋಗಾಲಯವಾದ ಗುಜರಾತಿಗೆ ಟಾಟಾನ ನ್ಯಾನೋ ಕಾರ್ ಯೋಜನೆ ಸ್ಥಳಾಂತರಗೊಂಡಿತು. ಕಳೆದ ೩೦ ವರ್ಷ ಪಶ್ಚಮ ಬಂಗಾಳವನ್ನು ಆಳಿರುವ ಎಡಪಕ್ಷಗಳು ಕಳೆದ ಚುನಾವಣೆಯಲ್ಲಿ ಇನ್ನಿಲ್ಲದಂತಹ ಸೋಲು ಕಂಡವು. ಈ ವಿಪರ್ಯಾಸ ಇಲ್ಲಿಗೆ ಅಂತ್ಯಗೊಳ್ಳುವುದಿಲ್ಲ. ಕೈಚಳಕದಂತೆ ಎಡಪಕ್ಷಗಳ ಸೋಲನ್ನು ಅವುಗಳ ವಿಳಂಬ ನೀತಿ ಮತ್ತು ಅಭಿವೃದ್ಧಿ ವಿರೋಧಿ ನೀತಿಗಳಿಗೆ ಆರೋಪಿಸಲಾಗುತ್ತಿದೆ! ಸ್ಟಾಕ್ ಮಾರ್ಕೆಟ್ಟು ಮತ್ತು ಟಿವಿ ಚಾನೆಲ್‌ಗಳು ಎಡಪಕ್ಷಗಳಿಂದ ಕಾಂಗ್ರೆಸ್ 'ಬಿಡುಗಡೆ' ಹೊಂದಿದ್ದನ್ನು ಸಂಭ್ರಮಿಸಿವೆ.

ಪ್ರಜಾಪ್ರಭುತ್ವದ 'ಸೌಂದರ್ಯ' ಇದೇನೆ. ಇದರಲ್ಲಿ ನಿಮಗೆ ಬೇಕಿರುವ ಅರ್ಥವನ್ನು ನೀವು ಹುಡುಕಿಕೊಳ್ಳಬಹುದು.

ರಾಜಕೀಯ ಮುಖ್ಯವಾಹಿನಿಯಲ್ಲಿ ನೈಜವಾದ ಎಡಪಕ್ಷಗಳ

ಗೈರುಹಾಜರಾತಿಯನ್ನೂ ಸಂಭ್ರಮಿಸಲಾಗುವುದಿಲ್ಲ. ಆದರೆ ಇವತ್ತಿನ ಅವಮಾನಕರ ಸ್ಥಿತಿಗೆ ಚುನಾವಣಾ ರಾಜಕೀಯದಲ್ಲಿ ತೊಡಗಿಸಿಕೊಂಡಿರುವ ಎಡಪಕ್ಷಗಳೇ ಹೊಣೆ ಇದರಿಂದಲಾದರೂ ಅವುಗಳು ಪಾಠ ಕಲಿತುಕೊಂಡು ಪ್ರಗತಿಪರ ರಾಜಕೀಯವನ್ನೂ ಅವಲಂಬಿಸುವಂತಾಗಲಿ. (ಸಾಭಾರ : ಲಂಕೇಶ್)

* * *

ಸಂತಾಪ

ಕಳೆದ ಜುಲೈ ೧೬ರಂದು ಕರ್ನಾಟಕ ಸಂಗೀತ ಕ್ಷೇತ್ರದ ಒಂದು ಕೂಹಿನೂರು ರತ್ನ ಕಳಚಿ ಬಿದ್ದಿತು. ೭೦ ವರ್ಷಗಳಿಗೂ ಹೆಚ್ಚು ಕಾಲ ಸಂಗೀತ ಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಶೈಲಿ, ಸಾಧನೆ ಮತ್ತು ಹಾಡುಗಾರಿಕೆಯಿಂದ ಸಂಗೀತ ಪ್ರೇಮಿಗಳ ಹೃದಯವನ್ನು, ಮನಸ್ಸನ್ನು ಜಯಸಿದ್ದ 'ಡಿ.ಕೆ.ಪಟ್ಟಮಾಳ್' ನಿಧನರಾದುದಕ್ಕೆ ಜನಪದ ವಿಚಾರವು ತನ್ನ ಶ್ರದ್ಧಾಪೂರ್ಣ ಸಂತಾಪವನ್ನು ವ್ಯಕ್ತಪಡಿಸುತ್ತದೆ.

* * *

ಸಂಗೀತ ಲೋಕದ ಅನರ್ಘ್ಯರತ್ನ, ಅಭಿಜಾತ ಕಲಾವಿದೆ ಗಾನವಿದುಷಿ ಪದ್ಮಭೂಷಣ 'ಡಾ.ಗಂಗೂಬಾಯಿ ಹಾನಗಲ್'ರವರು ೨೧\೦೭\೦೯ ಮಂಗಳವಾರದಂದು ನಿಧನರಾದರು. ಇವರಿಗೆ ೯೭ ವರ್ಷ ವಯಸ್ಸಾಗಿತ್ತು. ಅವರ ೮೫ ವರ್ಷಗಳ ಸಂಗೀತ ಬದುಕಿನಲ್ಲಿ ಹಿಂದೂಸ್ತಾನಿ ಸಂಗೀತ, ಕರ್ನಾಟಕ ಸಾಹಿತ್ಯ ಸಂಗೀತವನ್ನು ತಮ್ಮ ಶುಶ್ರಾವ್ಯ ಕಂಠದಿಂದ ಹಾಡಿ ಅಪಾರ ಅಭಿಮಾನಿಗಳನ್ನು ಸಂಪಾದಿಸಿದ್ದರು. ಇವರ ನಿಧನಕ್ಕೆ "ಜನಪದ ವಿಚಾರ"ವು ತನ್ನ ಸಂತಾಪವನ್ನು ಸೂಚಿಸುತ್ತದೆ.

* * *

ಸಮಾಜ ಜೀವನವನ್ನು ಸೂಕ್ಷ್ಮವಾಗಿ ಅವಲೋಕಿಸಿತ್ತಾ ತಮ್ಮ ಸಮಾಜ ಕ್ರಿಯೆಗಳನ್ನು ಸೂಕ್ಷ್ಮವಾಗಿ ಆದರೆ ಓದುಗರ ಮನವನ್ನು ತಲ್ಲಣಗೊಳಿಸುವ ರೀತಿಯಲ್ಲಿ ಕಥೆ, ಕವನ, ಲೇಖನಗಳ ಮೂಲಕ ಕನ್ನಡ ಸಾಹಿತ್ಯ ಸೇವೆಯನ್ನು ಮಾಡುತ್ತಾ ಎಲೆಯ ಮರೆಯ ಕಾಯಿಯಂತೆ ಇದ್ದು ಕಳೆದ ಜೂನ್೨೬ರಂದು 'ಬಿ.ಎಸ್.ವೆಂಕಟಲಕ್ಷ್ಮಿ'ಯವರು ನಿಧನರಾದುದಕ್ಕೆ ಜನಪದ ವಿಚಾರವು ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಜನಪದ ಸೇವಾ ಟ್ರಸ್ಟ್ ಸಮಾಚಾರ


ಮೈಸೂರು ಆಕಾಶವಾಣಿಯಲ್ಲಿ "ಬಿಂಬ" ಕಾರ್ಯಕ್ರಮದಡಿ ಜನಪದ ಸೇವಾಟ್ರಸ್ಟಿನ ಪರಿಚಯ ಮಾಡಿಕೊಡಲಾಯಿತು. ಸುಮಾರು ೭ವರ್ಷಗಳ ಹಿಂದೆ ಇಂಗ್ಲೆಂಡಿನ ಹೆಲ್ಪ್ ಎಂಬ ಯುವ ಸೇವಾ ಸಂಸ್ಥೆಯ ಪರವಾಗಿ ಸ್ವಯಂ ಸೇವಕರಾಗಿ ಟ್ರಸ್ಟಿನಲ್ಲಿ ಕೆಲಸ ಮಾಡಿದ್ದ ಸೈಮನ್ ಎಂಬ ಯುವಕ ತನ್ನ ಉನ್ನತ ವ್ಯಾಸಂಗದ ನಿಮಿತ್ತ ಮೇಲುಕೋಟೆಗೆ ಬಂದು ಟ್ರಸ್ಟಿನಲ್ಲಿ ಎರಡು ವಾರಗಳ ಕಾಲ ಇದ್ದು ಅಧ್ಯಯನ ಮಾಡಿದರು. ಅವರ ಅಧ್ಯಯನಕ್ಕೆ ಅಗತ್ಯವಾದ ವ್ಯವಸ್ಥೆ ಮತ್ತು ಸ್ಥಳೀಯ ಸಂಗತಿಗಳ ಬಗ್ಗೆ ಮಾರ್ಗದರ್ಶನ ನೀಡಲಾಯಿತು. ಶ್ರೀಕೃಷ್ಣ ಶಿಶುವಿಹಾರದ ಮಕ್ಕಳ ಆಟಕ್ಕೆ ಅನುಕೂಲವಾಗುವಂತೆ ಒಂದು ಮರಳು ತೊಟ್ಟಿಯನ್ನು ನಿರ್ಮಿಸಲಾಯಿತು. ಮಕ್ಕಳು ಅಲ್ಲಿ ಆಟವಾಡಿ ಸಂತೋಷಪಡುತ್ತಿದ್ದಾರೆ. ಮೈಸೂರಿನ ಭಗವಾನ್ ಫೆಥಾಲಜಿ ಸೆಂಟರಿನ ಮುಖ್ಯಸ್ಥರಾದ ಡಾ.ಶ್ರೀರಾಮ್ ಮತ್ತು ಅವರ ಕುಟುಂಬದವರು ಟ್ರಸ್ಟಿಗೆ ಭೇಟಿಕೊಟ್ಟರು. ಅದೇ ರೀತಿ ಟ್ರಸ್ಟಿನ ಅಭಿಮಾನಿ ಮತ್ತು ದಾನಿ ಶ್ರೀ ವಿಶ್ವನಾಥ್‌ರವರು ತಮ್ಮ ತಾಯಿ ಹಾಗೂ ಸಹೋದರರೊಂದಿಗೆ ಟ್ರಸ್ಟಿಗೆ ಭೇಟಿ ಕೊಟ್ಟರು. ಶ್ರೀ ವಿಶ್ವನಾಥ್‌ರವರು ಟ್ರಸ್ಟಿನ ಕಛೇರಿ ಮನೆಯಾದ ಜನಪದ ನಿಲಯದ ರಿಪೇರಿಗೆ ಸಹಾಯ ಮಾಡಿದ್ದಾರೆ. ಕಳೆದ ವರ್ಷ ಶಾಲಾ ಮಕ್ಕಳಿಗಾಗಿ ಪ್ರಾರಂಭಿಸಲಾಗಿದ್ದ 'ಕಥಾಕುಂಜ' ಕಾರ್ಯಕ್ರಮವನ್ನು ಪುನಃ ಪ್ರಾರಂಭಿಸಲಾಯಿತು. ಅದೇರೀತಿ ನೃತ್ಯ ತರಗತಿಯನ್ನು ಪುನಃ ಪ್ರಾರಂಭಿಸಲಾಯಿತು. ಟ್ರಸ್ಟಿನ ಆಡಳಿತ ಮಂಡಳಿಯ ಸಭೆ ನಡೆಯಿತು. ಈ ಸಭೆಯಲ್ಲಿ ಸುರೇಂದ್ರ ಕೌಲಗಿ, ಪ್ರಭಾಕರ್, ಸಂತೋಷ್ ಕೌಲಗಿ, ಗಿರಿಜಾ ಕೌಲಗಿ, ಕೆ.ಶ್ರೀನಿವಾಸ್ ಭಾಗವಹಿಸಿದ್ದರು. ಮೂರು ತಿಂಗಳ ಲೆಕ್ಕಪತ್ರ ಮತ್ತು ಕಾರ್ಯವರದಿಯನ್ನು ಅಂಗೀಕರಿಸಲಾಯಿತು. ಹೊಸ ಜೀವನ ದಾರಿ ಕೇಂದ್ರದಲ್ಲಿ ಕೆಲಸ ಮಾಡುವ ಕಾರ್ಯಕರ್ತರಿಗೆ ದಿನಕ್ಕೆ ಒಂದು ಸಲ ಚಹಾ ಕೊಡಬೇಕೆಂದು ತೀರ್ಮಾನಿಸಲಾಯಿತು. ಕರ್ನಾಟಕ ಸ್ಟಾಸ್ಟಿಕ್ಸ್ ಸೊಸೈಟಿಯ ಅಧಿಕಾರಿಗಳು ಟ್ರಸ್ಟಿಗೆ ಭೇಟಿ ಕೊಟ್ಟರು ಮತ್ತು ಟ್ರಸ್ಟಿನ ಆಶ್ರಯದಲ್ಲಿ ನಡೆಯುತ್ತಿರುವ ನೇಯ್ಗೆ ಮತ್ತು ಹೊಲಿಗೆ ವಿಭಾಗದ ಅಭಿವೃದ್ಧಿಗಾಗಿ ಧನಸಹಾಯ ಮಾಡುವುದಾಗಿ ತಿಳಿಸಿದರು.

೨೦೦೯ ಜುಲೈ ಮಾಹೆಯ ದಾನಿಗಳು

ಶ್ರೀ ಅನಿಲ್‌ಕುಮಾರ್, ಶ್ರೀ ಟಿ.ಆರ್.ಗಾಯಕವಾಡ್, ಶ್ರೀ ಚಲುವಯ್ಯ, ಶ್ರೀ ರವೀಂದ್ರ ಎಂ.ಮೊರಬ್, ಶ್ರೀ ಹೆಚ್.ಎಂ.ಶಿವಲಿಂಗಮೂರ್ತಿ –ಬೆಂಗಳೂರು; ಶ್ರೀ ಎನ್.ಬಿ.ಬೋರಯ್ಯ, ಡಾ.ಎನ್.ಶ್ರೀರಾಮ್, ಎಂ.ಕೆ.ರಾಮಚಂದ್ರಶಾಸ್ತ್ರೀ–ಮೈಸೂರು; ಶ್ರೀಮತಿ ತನುಪ್ರಕಾಶ್ –ನಗುನಹಳ್ಳಿ; ಶ್ರೀ ಕೆ.ರಮೇಶ್‌ರಾವ್ –ಮಂಗಳೂರು; ಶ್ರೀ ಟಿ.ನಾರಾಯಣಗೌಡ –ಕೋಲಾರ; ಶ್ರೀಮತಿ ಜಯಂತಿ ರಾಮಪ್ರಸಾದ್–ಚೆನ್ನೈ; ಶ್ರೀಮತಿಶ್ರೀ ಕಲಾನಾಗರಾಜ್ –ನವದೆಹಲಿ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ .. ೬೯

- ಸುರೇಂದ್ರ ಕೌಲಗಿ



ಮುಂಬೈನಲ್ಲಿ ಜಯಪ್ರಕಾಶ ನಾರಾಯಣರೊಂದಿಗೆ ನನ್ನ ಭೇಟಿಯಾಗಿ ಅವರು ನನ್ನನ್ನು ತಮ್ಮ ಆಪ್ತ ಸಹಾಯಕನನ್ನಾಗಿ ಮಾಡಿಕೊಂಡಿದ್ದು ೧೯೫೪ರಲ್ಲಿ. ಅದಕ್ಕಿಂತ ಎರಡು ವರ್ಷ ಮೊದಲು ಅವರು ಭೂದಾನ-ಸರ್ವೋದಯ ಆಂದೋಲನಕ್ಕೆ ತಮ್ಮ ಜೀವನದಾನ ಮಾಡಿ ಬೋಧಗಯಾ ಸರ್ವೋದಯ ಸಮ್ಮೇಳನದಲ್ಲಿ ಜೀವನದಾನಿ ಜೆ.ಪಿ. ಎಂಬ ಹೆಸರು ಪಡೆದಿದ್ದರು. ಭೂದಾನ ಆಂದೋಲನ ಬಿಹಾರ್ ರಾಜ್ಯದಲ್ಲಿ ತೀವ್ರವಾಗಿ ನಡೆಯುತ್ತಿತ್ತು. ಹೆಚ್ಚು ಭೂಮಿ ದಾನವಾಗಿ ದೊರೆತದ್ದು ಆ ರಾಜ್ಯದಲ್ಲಿಯೇ. ಆ ರಾಜ್ಯದ ಗಯಾ ಜಿಲ್ಲೆಯ ನವಾದಾ ಸಬ್-ಡಿವಿಜನ್ ವ್ಯಾಪ್ತಿಗೆ ಸೇರಿದ ಕೌವಾಕೋಲ್ ಪೋಲೀಸ್ ಠಾಣೆಯ ವ್ಯಾಪ್ತಿಗೆ ಒಳಗಾಗಿದ್ದ ಸೋಖಾದೇವರಾ ಎಂಬ ಹಳ್ಳಿಯ ಬಳಿ ಸುಮಾರು ತನ್ನಲ್ಲಿದ್ದ ೧೫೦ ಎಕರೆಗೂ ಮಿಕ್ಕಿ ವಿಶಾಲವಾದ ಹೆಚ್ಚುವರಿ ಭೂಮಿಯನ್ನು ಅಲ್ಲಿಯ ಗಣೇಶ್ ಮಹತೊ ಎಂಬ ಜಮೀನ್ದಾರ ವಿನೋಬಾರ ಭೂದಾನ ಯಜ್ಞಕ್ಕೆ ದಾನವಾಗಿ ಕೊಟ್ಟಿದ್ದ. ಆ ಜಮೀನನ್ನು ಜಯಪ್ರಕಾಶನಾರಾಯಣರು ಸರ್ವೋದಯ ಕಾರ್ಯಕ್ರಮಕ್ಕೆ ಉಪಯೋಗಿಸಲು ಆಲೋಚಿಸಿದರು. ವಿನೋಬಾರ ಸಹಮತಿಯೊಂದಿಗೆ ಅಲ್ಲಿ ಆಶ್ರಮ ಸ್ಥಾಪಿಸಲು ಆಲೋಚಿಸಿ ಅದಕ್ಕೆ ಸರ್ವೋದಯ ಆಶ್ರಮವೆಂದು ನಾಮಕರಣ ಮಾಡಿದರು. ಅವರ ಉದ್ದೇಶ ಅಲ್ಲಿಗೆ ಅಖಿಲ ಭಾರತದಿಂದ ಸರ್ವೋದಯ ಕಾರ್ಯಕರ್ತರು, ಜೀವನ ದಾನಿಗಳು ಬರಬೇಕು. ಆ ಆಶ್ರಮದಲ್ಲಿ ಇದ್ದು ಸರ್ವೋದಯ ವಿಚಾರದ ಬಗ್ಗೆ, ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಚರ್ಚಿಸಿ, ವಿಚಾರ ವಿನಿಮಯ, ಅನುಭವ ವಿನಿಮಯ ಮಾಡಿಕೊಳ್ಳಬೇಕು ಮತ್ತು ಪುನಃ ಹೊಸ ಸಂಕಲ್ಪದೊಂದಿಗೆ ಹೊಸ ಉತ್ಸಾಹದೊಂದಿಗೆ ಭೂದಾನ ಯಜ್ಞ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಮತ್ತು ತನ್ಮೂಲಕ ವಿನೋಬಾರವರು ನಿಗದಿಪಡಿಸಿರುವ ಭೂದಾನದ ಗುರಿಯನ್ನು ತಲುಪುವುದಕ್ಕೆ ಕಂಕಣ ಬದ್ಧರಾಗಬೇಕು ಹಾಗು ಆ ಆಶ್ರಮದಲ್ಲಿ ವಿವಿಧ ಬಗೆಯ ಗ್ರಾಮೋದ್ಯೋಗಗಳನ್ನು ಪ್ರಾರಂಭಿಸಬೇಕು ಮತ್ತು ಅವು ಬೇರೆ ಗ್ರಾಮಗಳಿಗೆ ಮಾದರಿಯಾಗಬೇಕೆಂಬುದು ಆಗಿತ್ತು. ಆಶ್ರಮ ಪ್ರಾರಂಭವಾಯಿತು. ಕಾರ್ಯಕರ್ತರ ನಿವಾಸಕ್ಕೆ ಮತ್ತು ಭೋಜನಾಲಯಕ್ಕೆ ಬೇಕಾದ ಮನೆಗಳನ್ನು ಮಣ್ಣಿನಿಂದ ಕಟ್ಟಲಾಗಿತ್ತು. ಮೇಲ್ಛಾವಣಿಗಾಗಿ ಅಲ್ಲಿಯೇ ಪಕ್ಕದ ಕಾಡಿನಲ್ಲಿ ಯಥೇಚ್ಛವಾಗಿ ದೊರೆಯುತ್ತಿದ್ದ ಹುಲ್ಲನ್ನು ತಂದು ಹೊದಿಸಲಾಗಿತ್ತು. ಪ್ರಾರಂಭದಲ್ಲಿ ಐದಾರು ಮನೆಗಳು ಸಿದ್ಧವಾದವು. ಜೆ.ಪಿ.ಯವರ ಉಪಯೋಗಕ್ಕಾಗಿ ಆಶ್ರಮದ ಒಂದು ಮೂಲೆಯಲ್ಲಿ 'ಜೆ.ಪಿ.ನಿವಾಸ'ವನ್ನು ಕಟ್ಟಲಾಗಿತ್ತು. ಆ ಮನೆಯಲ್ಲಿ ಹತ್ತಾರು ಜನ ಕುಳಿತುಕೊಳ್ಳಬಹುದಾದ ಒಂದು ಹಾಲ್, ಹಿಂಭಾಗದಲ್ಲಿ ಅವರ ಮತ್ತು ಪ್ರಭಾವತಿಯವರ ವಾಸಕ್ಕಾಗಿ ಪ್ರತ್ಯೇಕ ಒಂದೊಂದು ರೂಂ ಮತ್ತು ಹಿತ್ತಲ ಭಾಗದಲ್ಲಿ ಎದುರು ಬದುರಾಗಿ ಎರಡು ಚಿಕ್ಕ ರೂಂಗಳು. ಅವುಗಳಲ್ಲಿ ಒಂದು ಅಡಿಗೆ ಮನೆ, ಇನ್ನೊಂದು ಸ್ನಾನದ ಮನೆ. ಶೌಚಾಲಯವನ್ನು ಮನೆಯಿಂದ ಹೊರಗೆ ದೂರದಲ್ಲಿ ತಡಿಕೆಗಳ ಸಹಾಯದಿಂದ ನಿರ್ಮಿಸಲಾಗಿತ್ತು. ಅದೊಂದು ಟ್ರೆಂಚ್ ಶೌಚಾಲಯ. ಮನೆಯ ಹಿಂಭಾಗದಲ್ಲಿಯೇ ದೊಡ್ಡ ಕಾಡು ಇದ್ದ ಒಂದು ಪರ್ವತ. ಆ ಪರ್ವತದಾಚೆಗೆ ಇದ್ದುದೇ ಹಜಾರಿಬಾಗ್ ಜಿಲ್ಲೆ. ಆ ಜಿಲ್ಲೆಯಲ್ಲಿದ್ದ ದೊಡ್ಡ ಜೇಲಿನಿಂದಲೇ

ಜೆ.ಪಿ. ಗೋಡೆ ಹಾರಿ ಬಂದು ತಪ್ಪಿಸಿಕೊಂಡದ್ದು. ಆ ಕಾಡಿನಲ್ಲಿ ಹುಲಿಯೂ ಸೇರಿದಂತೆ ಅನೇಕ ಕಾಡು ಪ್ರಾಣಿಗಳಿದ್ದವು. ಆಗಾಗ್ಗೆ ಹುಲಿಗಳ ಘರ್ಜನೆ ಕೇಳಿ ಬರುತಿತ್ತು. ಈ ಜೆ.ಪಿ.ನಿವಾಸದ ಮುಂದೆ ಸ್ವಲ್ಪ ಅಂಗಳ ಮತ್ತು ಹಿಂದೆ ಸ್ವಲ್ಪ ಹಿತ್ತಲು ಇತ್ತು. ಜೆ.ಪಿ.ಯೊಂದಿಗೆ ನನ್ನ ಭೇಟಿಯಾದ ಮೇಲೆ ಅವರು ನನ್ನನ್ನು ಈ ಆಶ್ರಮಕ್ಕೆ ಕಳುಹಿಸಿದರು. ಆಗ ಅಲ್ಲಿಗೆ ಕರ್ನಾಟಕದಿಂದ ಪ್ರಭಾಕರ್ ಬಲ್ಜೇಕರ್ ಎಂಬವರನ್ನು ಕೂಡ ಜೆ.ಪಿ. ಕಳುಹಿಸುವವರಾಗಿದ್ದರು. ಬಲ್ಜೇಕರ್ ಕರ್ನಾಟಕದ ಮಂಗಳೂರಿನವರು, ತುಳು-ಕನ್ನಡ ಮಾತನಾಡುತ್ತಿದ್ದರು. ಅವರು ಕೃಷಿ ಪದವಿಧರರಾಗಿದ್ದರು. ವ್ಯವಸಾಯದ ಅನುಭವವೂ ಇದ್ದಿರಬೇಕು. ಸೊಖೋದೇವರಾ ಆಶ್ರಮದ ತಮ್ಮ ವಿಶಾಲವಾದ ಜಮೀನನಲ್ಲಿ ವ್ಯವಸಾಯ ಮಾಡಿಸಬೇಕು, ತೋಟಗಾರಿಕೆ ಮಾಡಿಸಬೇಕೆಂಬುಡು ಜಯಪ್ರಕಾಶರ ಇಚ್ಛೆಯಾಗಿತ್ತು. ಆ ಕೆಲಸ ಪ್ರಾರಂಭಿಸಲು ಮತ್ತು ಮೇಲ್ವಿಚಾರಣೆ ಮಾಡಲು ಜೇ.ಪಿ. ಬಲ್ಜೇಕರವರನ್ನು ತಮ್ಮ ಆಶ್ರಮಕ್ಕೆ ಕಳುಹಿಸುತ್ತಿದ್ದರು. ಅವರ ಜೊತೆಯೇ ನನ್ನನ್ನು ಮುಂಬೈನಿಂದ ಬಿಹಾರ್‌ಕ್ಕೆ ಕಳುಹಿಸಿದರು. ಇಬ್ಬರೂ ಆಶ್ರಮಕ್ಕೆ ಹೋದೆವು. ಬಲ್ಜೇಕರ್ ಆಗಲೇ ಖಾದಿಧಾರಿಗಳಾಗಿದ್ದರು. ತಮ್ಮ ಮೊದಲಿನ ಪ್ಯಾಂಟ್ ಮತ್ತು ಬುಶ್‌ಶರ್ಟ್ ತ್ಯಜಿಸಿ ಖಾದಿ ಪಂಚೆ ಮತ್ತು ಅರ್ಧತೋಳಿನ ಬನಿಯನ್ ಧರಿಸುತ್ತಿದ್ದರು. ನಾವಿಬ್ಬರೂ ತುಂಬ ಶ್ರಮಪಟ್ಟು ದೂರದ ಸೋಖೋದೇವರಾ ಆಶ್ರಮಕ್ಕೆ ತಲುಪಿದಾಗ ಆಗಲೇ ಅಲ್ಲಿ ಹಲವಾರು ಸರ್ವೋದಯ ಮತ್ತು ಭೂದಾನ ಕಾರ್ಯಕರ್ತರು ಬಂದಿದ್ದರು. ಅವರಲ್ಲಿ ಹೆಚ್ಚಿನವರು ಬಿಹಾರ್ ರಾಜ್ಯದವರೇ ಆಗಿದ್ದರು. ಕೇರಳದಿಂದ ಕುರಿಯನ್, ರುದ್ರಮ್ಮ ಮತ್ತು ರಾಜಮ್ಮ ಎಂಬುವರು ಇದ್ದರು. ನಾನೂ ದಕ್ಷಿಣದವನೇ ಆದ್ದರಿಂದ ಅವರು ನನ್ನನ್ನು ಸಂತೋಷದಿಂದ ಬರಮಾಡಿಕೊಂಡಿದ್ದರು. ದಕ್ಷಿಣದವರಾದ ನಮಗೆ ಯಾರಿಗೂ ಸರಿಯಾಗಿ ಹಿಂದಿ ಮಾತನಾಡಲು ಬರುತ್ತಿರಲಿಲ್ಲ. ಅರ್ಧ ಇಂಗ್ಲಿಷ್, ಅರ್ಧ ಹಿಂದಿ ಕಲಬೆರಕೆ ಭಾಷೆಯಲ್ಲಿ ಮಾತನಾಡುತ್ತಿದ್ದೆವು. ನಾನು ಕೆಲವೇ ದಿನಗಳಲ್ಲಿ ಹಿಂದಿಯಲ್ಲಿ ಚೆನ್ನಾಗಿ ಮಾತನಾಡುವುದನ್ನು ಕಲಿತೆ. ಕೇರಳದ ಸಹೋದರರು ಈ ವಿಷಯದಲ್ಲಿ ಹಿಂದೆಯೇ ಉಳಿದರು. ಆ ಸಮಯದಲ್ಲಿ ಆಶ್ರಮದಲ್ಲಿ ಬಿಹಾರ್ ರಾಜ್ಯದ ಗೀತಾಪ್ರಸಾದ್, ಕೇಶವಭಾಯಿ ಮಿಶ್ರ, ತ್ರಿಪುರಾರಿ ಶರಣ, ಅವದ್ ಬಿಹಾರಿ, ದಯಾನಂದ ಸಹಾಯ, ಸುಶೀಲಾ ಬೆಹನ್, ಡಾ.ರವಿಶಂಕರ ಶರ್ಮಾ, ವಾಸಂತಿ, ದತ್ತಬಾಬು, ಕಪಿಲ ಭಾಯಿ, ಜಗದೀಶ ಭಾಯಿ, ರಾಜಸ್ಥಾನದ ಮೋಹನ ಭಂಡಾರಿ, ಸುಖದೇವಭಾಯಿ, ಕರ್ನಾಟಕದ ಮೋಹನಕುಮಾರ್ ಎಂಬುವವರು ಇದ್ದರು. ಇವರಲ್ಲಿ ಕೆಲವರು ಮೊದಲು ಸಮಾಜವಾದಿ ಪಕ್ಷದಲ್ಲಿದ್ದವರು. ಜೆ.ಪಿ ಪಕ್ಷ ರಾಜಕಾರಣ ತೊರೆದು ಸರ್ವೋದಯ ಆಂದೋಲನಕ್ಕೆ ಬಂದಾಗ ಅವರೊಂದಿಗೆ ಇವರೂ ಸರ್ವೋದಯ ಕ್ಷೇತ್ರಕ್ಕೆ ಬಂದಿದ್ದರು. ಆದರೆ ಅವರು ಇನ್ನೂ ಪಕ್ಷ ರಾಜಕಾರಣದ ಗುಂಗಿನಲ್ಲೇ ಇದ್ದವರು. ಪಕ್ಷಬಿಟ್ಟು ಬಂದು ಜೆ.ಪಿ. ಎಲ್ಲೋ, ಏನೋ ತಪ್ಪು ಮಾಡಿದ್ದಾರೆ ಎಂದು ಅವರಿಗೆ ಅನಿಸುತಿತ್ತು. ತಾವೂ ಸಹ ತಪ್ಪು ಮಾಡಿರಬಹುದೇನೋ ಎಂಬ ಅಳುಕು ಅವರನ್ನು ಕಾಡುತ್ತಿತ್ತು. ಪಕ್ಷದಲ್ಲಿರುವ ಶಿಸ್ತು ಮುಖ್ಯವಾಗಿ ನಾಯಕರಿಗೆ ನಿಷ್ಠೆಯಿಂದಿರುವುದು ಸರ್ವೋದಯ ಕಾರ್ಯಕರ್ತರಲ್ಲಿ ಇಲ್ಲದಿರುವುದನ್ನು ಅವರು ಟೀಕಿಸುತ್ತಿದ್ದರು. ಸರ್ವೋದಯ ಕಾರ್ಯಕರ್ತರೆಂದರೆ ಕೇವಲ ಪ್ರಾರ್ಥನೆ ಮಾಡುವಂಥ ನಿರುಪದ್ರವಿ ಜೀವಿಗಳೆಂದು ಭಾವಿಸಿ ಹಾಸ್ಯ ಮಾಡುತ್ತಿದ್ದರು. ಆದರೆ ಆಶ್ರಮದಲ್ಲಿ ಸರ್ವೋದಯ ವಿಚಾರಕ್ಕೆ ತುಂಬ ನಿಷ್ಠೆ ಹೊಂದಿದ ಕಾರ್ಯಕರ್ತರೂ ಇದ್ದರು. ಹೀಗೆ ಜೆ.ಪಿ. ತಮ್ಮ ಆಶ್ರಮವನ್ನು ಸ್ಥಾಪಿಸಿದ ಮುನ್ನುಡಿಯ ಕಾಲದಲ್ಲಿ ಮಿಶ್ರ ಸ್ವಭಾವದ ಕಾರ್ಯಕರ್ತರಿದ್ದರು. ಪಕ್ಷ ರಾಜಕಾರಣದ ಯಾವ ಗಂಧವೂ ಇದ್ದಿಲ್ಲದ, ಸರ್ವೋದಯ ವಿಚಾರ ತುಂಬ ಅಪರಿಚಿತವಾಗಿದ್ದ ನನ್ನ ಜೀವನ ಜೆ.ಪಿ.ಯವರ ನಿಕಟ ಸಾನಿಧ್ಯದಲ್ಲಿ ಪರೋಕ್ಷವಾಗಿ ಸಮಾಜ ಸೇವೆಗೆ ಜೀವನದಾನಿಯ ರೂಪವನ್ನು ತಳೆಯುತ್ತ ಓರ್ವ ಹಿರಿಯ 'ಜೀವನದಾನಿ'ಗೆ ಕಿರಿಯ ಜೀವನದಾನಿಯಾಗಿ ಬೆಳೆಯುತ್ತ ಬಂದಿತು.

(ಮುಂದುವರಿಯುವುದು..)

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ.ಎ.ಜಿ.ಸದಾಶಿವ, ಬೆಂಗಳೂರುರವರು ೧೦೦೦/-ರೂಗಳನ್ನು ಕಳುಹಿಸಿ ನೆರವಾಗಿದ್ದಾರೆ.

ಈ ಕೆಳಗಿನ ಬಂಧುಗಳು ತಮ್ಮ ಚಂದಾ ನವೀಕರಿಸಿದ್ದಾಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದದ್ದಕ್ಕಾಗಿ;

ಶ್ರೀ ಆರ್.ಕೆ.ನಾರಾಯಣ-ಮೇಲುಕೋಟೆ;

ಶ್ರೀ ಆರ್.ಪಿ.ಪುಟ್ಟರಾಜು-ಬಳಿಘಟ್ಟ;

ಶ್ರೀ ಬೋರಾಪುರದ ಜಯರಾಮು-ಪಾಂಡವಪುರ,

ಶ್ರೀ ಶಂಭೂನಹಳ್ಳಿ ಕೃಷ್ಣೆಗೌಡ-ಶಂಭೂನಹಳ್ಳಿ, ಇವರಿಗೆ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

-ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ
(-ಸಂಪಾದಕರು)

ತೆರೆದ–ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at Sanketh, Mudrana, Melkote. Phone : 08236 – 299998 e-mail : janapada@yahoo.com web : janapada.net